ಕನ್ಯೆ ಪ್ರತಿ ಸೋಮವಾರ ಹಾಟಕೇಶ್ವರ ದೇವಾಲಯಕ್ಕೆ ಹೋಗಿ ಬರುತ್ತಿದ್ದಳು. ಒಂದು ಸಲ ಅಲ್ಲಿಗೆ ತ್ರಿಲೋಕ ಸಂಚಾರಿಯಾದ ನಾರದರು ಬಂದರು. ವಿದ್ಯಾಧರ ಕನ್ಯೆಯು ನಾರದರಿಗೆ ವಂದಿಸಿ," ಮಹಾತ್ಮ ನಾನೀಗ ಈ ರಾಕ್ಷಸನಿಂದ ಇಲ್ಲಿ ಬಂಧಿಯಾಗಿದ್ದೇನೆ. ನನ್ನ ತಂದೆ ಅಲ್ಲಿ ನನಗಾಗಿ ಪರಿತಪಿಸುತ್ತಿರುತ್ತಾರೆ. ಈತನಾದರೋ ಎಂಟು ತಿಂಗಳ ನಂತರ ನನ್ನನ್ನು ಮದುವೆಯಾಗುವುದಾಗಿ ಹೇಳುತ್ತಿದ್ದಾನೆ. ಇವನಿಂದ ನನ್ನನ್ನು ಹೇಗಾದರೂ ಪಾರುಮಾಡಬೇಕು ಎಂದು ಬೇಡಿಕೊಂಡಳು. ನಾರದನು ದಿವ್ಯದೃಷ್ಟಿಯಲ್ಲಿ ಎಲ್ಲವನ್ನೂ ಅರಿತುಕೊಂಡನು. ಕನ್ಯೆಯನ್ನು ಕುರಿತು ಮಗು ನೀ ಭಯಪಡಬೇಡ. ಶೀಘ್ರದಲ್ಲಿಯೇ ಹರಿಭಕ್ತನಾದೊಬ್ಬ ರಾಜನು ಬಂದು ರಾಕ್ಷಸನನ್ನು ವಧಿಸಿ ನಿನ್ನ ಕೈ ಹಿಡಿಯುತ್ತಾನೆ. ಅದುವರೆಗೂ ನೀನು ನಾಳೆ ಮಾಘಮಾಸ ಆರಂಭವಾಗುತ್ತದೆ. ಎದುರಿನಲ್ಲಿರುವ ಸರೋವರದಲ್ಲಿ ಸ್ನಾನಮಾಡಿ, ಶಿವನನ್ನು ಪ್ರಾರ್ಥಿಸು. ನಿನ್ನ ಇಷ್ಟಾರ್ಥವು ಈಡೇರುವುದು. ಮಾಘಸ್ನಾನ ಮಾಡಿ ಶಿವನನ್ನು ಪ್ರಾರ್ಥಿಸುವವರು ತಮಗೆ ಬೇಕಾದುದನ್ನು ಪಡೆಯಲು ಅರ್ಹರಾಗುತ್ತಾರೆ. ಕನ್ಯೆಗೆ ವರನೂ, ವರನಿಗೆ ಕನ್ಯೆಯೂ, ಕಷ್ಟಹರವೂ, ಸುಖಪ್ರದವೂ ಮುಕ್ತಿಯೂ, ಇಷ್ಟಾರ್ಥ ಸಿದ್ಧಿಗಳು ಈ ಮಾಘವ್ರತದಿಂದ ಲಭಿಸುವುದು. ಎಂದು ಹೇಳಿ ಹೊರಟುಹೋದರು. ವಿದ್ಯಾಧರ ಕನ್ಯೆಯು ಹಾಗೆಯೇ ಮಾಘ ಮಾಸದಲ್ಲಿ ಸ್ನಾನಮಾಡಿ ಶಿವನನ್ನು ನಿತ್ಯವೂ ಭಕ್ತಿಯಿಂದ ಪೂಜಿಸುತ್ತಿದ್ದಳು. ಇತ್ತ ನಾರದನು ಸೌರಾಷ್ಟ್ರ ದೇಶಕ್ಕೆ ಬಂದನು. ಅಲ್ಲಿಯ ರಾಜ ಹರಿದ್ರಥನೆಂಬ

ಆಕೆಯನ್ನು ಹೊಡೆಯಲು ನೀರಲ್ಲಿಳಿದ. ಕುಮುದಳು ಬಲವಂತದಿಂದ ಆತನನ್ನು ನೀರಿನಲ್ಲಿ ಮುಳುಗಿಸಿದಳು. ಬ್ರಾಹ್ಮಣ ಸ್ನಾನಮಾಡಿ ಶ್ರೀರಂಗದ ಕಡೆ ನಡೆದ.

ಕೆಲ ದಿನಗಳ ನಂತರ ಸುಮಂದ, ಕುಮುದಳು ಮರಣಿಸಿದರು. ದೇವ ದೂತರು, ಯಮದೂತರೂ ಹಾಜರಾದರು. ದೇವದೂತರು ಕುಮುದಳನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೊರಡಲನುವಾದರು. ಯಮದೂತರು ಸುಮಂದನನ್ನು ಹಿಡಿದು ಹೊರಡುತ್ತಲಿರಲು. ದೇವದೂತರು "ಅಯ್ಯಾ ಯಮ ಕಿಂಕರರೇ ಈತನನ್ನು ನೀವೇಕೆ ಕೊಂಡೊಯ್ಯಲು ಬಂದಿರಿ. ಏನು ಪಾಪ ಗಳನ್ನು ಮಾಡಿದ್ದಾನೆ. ಆಗ ಯಮ ಕಿಂಕರರು ಈತ ಮಹಾ ಲೋಭಿಯಾಗಿ ಏನನ್ನೂ ಜೀವನದಲ್ಲಿ ದಾನವನ್ನು ಮಾಡಿಲ್ಲ. ಎಲ್ಲರನ್ನು ಮೋಸಗೊಳಿಸಿ ಹಣ ಗಳಿಸಿದ್ದಾನೆ. ಹಸು ಕರುಗಳನ್ನು ವಿಕ್ರಯಿಸಿದ್ದಾನೆ. ತಾನೂ ತಿನ್ನದೆ ಪರ ರಿಗೂ ಕೊಡದೆ ಹುದುಗಿಸಿಟ್ಟಿದ್ದಾನೆ. ಪುಣ್ಯ ಕಾರ್ಯವೆಸಗುವ ಹೆಂಡತಿಯನ್ನು ತಡೆದು ಹೊಡೆದಿದ್ದಾನೆ ಎಂದರು.

ಆಗ ದೇವದೂತರು, ಎಲ್ಲಾ ಸರಿಯೇ ಆದರೆ ಆತನು ಮಾಘಸ್ನಾನ ಮಾಡಿದ್ದಾನೆ ಎಂಬುದನ್ನು ಮರೆತಿರಾ. ಇಚ್ಛೆಯಿಂದಲೋ ಬಲವಂತದಿಂದಲೋ ಮಾಘಸ್ನಾನ ಮಾಡಿದರೂ ಎಲ್ಲಾ ಪಾಪಗಳು ಪರಿಹಾರವಾಗುವುದು ನಿಮಗೆ ತಿಳಿಯದೇ, "ಹೋಗಿ" ಎಂದು ಗದರಿಸಿದರು. ಯಮ ಭಟರು ಸುಮಂದನನ್ನು ಬಿಟ್ಟು ನಡೆದರು.

ಕುಮುದಾ ಸುಮಂದರು ದೇವಲೋಕವನ್ನು ಸೇರಿ ಶಾಶ್ವತ ಸುಖ ವನ್ನು ಪಡೆದರೆಂಬಲ್ಲಿಗೆ ಆರನೇ ಅಧ್ಯಾಯವು ಮುಗಿದುದು.

ನೀತಿ : ಸತ್ಸಹವಾಸದಿಂದ ಒಳ್ಳೆಯದಾಗುವುದು ಖಚಿತ.

ಸ್ವಾಮಿದೇವ ಕಿರಾತಕ ಹೆಚ್ಚಿನ ಪಾಪಗಳನ್ನು ಮಾಡಿದ್ದಾನೆ. ಬ್ರಹ್ಮಹತ್ಯೆ, ಸುರಾಪಾನ, ಪರರ ಧನಾಪಹರಣ. ಇನ್ನು ಅಕ್ಕಸಾಲಿಗ. ಅವನು ಚಿನ್ನ ಕದ್ದು ಪಾಪಿಗೆ ಸಹಾಯಕನಾಗಿದ್ದಾನೆ. ಮೂರನೆಯವನಾದರೋ ಶೂದ್ರ. ಅವನು ತನ್ನ ತಾಯಿಯೊಂದಿಗೆ ರಮಿಸಿದ ನೀಚ. ಆ ಮೂರು ಜನರ ಪಾತಕಗಳು ನಿನಗೂ ಸೇರಿವೆ. ನೀನು ಅವರ ಸಹವಾಸ ಮಾಡಿ, ಅವರ ಪಾಪಗಳನ್ನೆಲ್ಲಾ ಪಡೆದೆ. ನಿನ್ನ ಪುಣ್ಯವೆಲ್ಲಾ ನಾಶಮಾಡಿದೆ. ನೀನೂ ಮಹಾ ಪಾಪಿಯಾಗಿರುವೆ. ಒಂದು ವೇಳೆ, ಪಾಪಿಗಳ ಕೈಲಿ ಮಾತನಾಡಬೇಕಾಗಿ ಬಂದರೆ ತಲೆಯ ಮೇಲೆ ಎರಡು ಧರ್ಭೆಯನ್ನು ಇಟ್ಟುಕೊಂಡು ಮಾತನಾಡಬೇಕು. ಹಾಗೆ ಮಾಡಿದರೆ ಪಾಪ ಅಂಟುವುದಿಲ್ಲ.

ಮಹಾ ಪಾತಕರೊಂದಿಗೆ ಸೇರಿ ಊಟ, ಮಾತು, ಶಯನ, ವಿಹಾರ ಮಾಡಿದ ಪಾಪಗಳು ದೂರವಾಗಲು ಸಾಧ್ಯವೇ ಇಲ್ಲ. ಅಂತಹವರ ಸಂಗ ಮಾಡಿದ ನಿನ್ನ ಮುಖವನ್ನು ನಾನು ನೋಡಬಾರದು. ಬ್ರಹ್ಮಹತ್ಯೆ, ಸುರಾಪಾನ, ಬಂಗಾರ ಕದ್ದ, ಪರಸ್ತ್ರೀ ಸಂಗ ಮಾಡಿದವರೆಲ್ಲರೂ ಮಹಾ ಪಾತಕರಲ್ಲವೇ ? ಅವರೊಂದಿಗೆ ಸೇರಿದವನು ಚಂಡಾಲನೆಂದೇ ದೂರವಿಡಬೇಕು." ಎಂದು ಹೇಳಲು, ವಿಶ್ರುಂಖಲನು ಪಶ್ಚಾತ್ತಾಪಪಟ್ಟು, ವೀರವ್ರತನನ್ನು ಕುರಿತು ಸ್ವಾಮೀ ನನ್ನ ಸಮಸ್ತ ಪಾಪಗಳೂ ದೂರವಾಗುವ ದಾರಿ ತೋರಿಸಿ ಉದ್ಧಾರ ಮಾಡಬೇಕೆಂದು ಪ್ರಾರ್ಥಿಸಿದನು. ದಯಾಮಯನಾದ ವೀರವ್ರತನು ಕನಿಕರಿಸಿ, ಧರ್ಮ ಶಾಸ್ತ್ರಗಳಿಗೆ ಅನುಸಾರವಾದ ಪ್ರಾಯಶ್ಚಿತ್ತವನ್ನು ಹೇಳಿದನು. "ಎಲೈ ಬ್ರಾಹ್ಮಣಾ, ನೀನು ನಿನ್ನ ಪಾಪಗಳನ್ನು ಸ್ಮರಿಸುತ್ತಾ, ಹನ್ನೆರಡು ವರ್ಷ ತೀರ್ಥಯಾತ್ರೆ ಮಾಡು. ಪ್ರತಿದಿನ ಒಂದೊಂದು ಗ್ರಾಮದಲ್ಲಿ ಮನೆ ಮನೆಗೆ ಹೋಗಿ, ಭಿಕ್ಷಾಟನೆ ಮಾಡಿ ಭುಜಿಸು. ಪ್ರತಿ ವರ್ಷ ಮಾಘ ಮಾಸದಲ್ಲಿ ಪ್ರಯಾಗಕ್ಕೆ ಹೋಗಿ ಮಾಘಸ್ನಾನವಾಚರಿಸು. ಆಗ ನಿನಗೆ ಪ್ರಾಯಶ್ಚಿತ್ತವಾಗಿ ಪಾಪದಿಂದ ಬಿಡುಗಡೆ ಹೊಂದುವೆ.

ವಿಶ್ರುಂಖಲನು ವೀರವ್ರತನ ಮಾತುಗಳನ್ನು ಕೇಳಿ, "ಮಹಾತ್ಮಾ. ನನ

ಪರಿಶುದ್ಧ ಆಕೆಯನ್ನು ಕರೆದುಕೊಂಡು ವಿದ್ಯಾಧರನ ಬಳಿಗೆ ಬಂದು, ಆತನ ಆಶೀರ್ವಾದದಿಂದ ಆಕೆಯನ್ನು ವಿವಾಹವಾದನು. ಮಾವನಿಗೆ ವಂದಿಸಿ ಹೆಂಡತಿಯೊಡನೆ ತನ್ನ ರಾಜ್ಯ ಸೇರಿದನು. ಗಂಡ ಹೆಂಡಿರಿಬ್ಬರೂ ಜೀವನವಿಡೀ ಮಾಘ ವ್ರತ ಆಚರಿಸುತ್ತಾ, ಕಡೆಯಲ್ಲಿ ದೇವಲೋಕವನ್ನು ಸೇರಿದರು ಎಂಬಲ್ಲಿಗೆ ಎಂಟನೆಯ ಅಧ್ಯಾಯವು ಮುಗಿದುದು.

ನೀತಿ : ಎಲ್ಲವುದಕ್ಕೂ ದೈವಾನುಗ್ರಹ ಬೇಕು

ಅಧ್ಯಾಯ ಒಂಭತ್ತು

ಇಂದ್ರನಿಗೆ ರತಿದೋಷ ಗಾರ್ಧಭರೂಪ

ಪೂರ್ವದಲ್ಲಿ ವೇದ ವೇದಾಂಗ ಪಾರಂಗತನಾದ ಗೃತ್ಸನು ಮಹರ್ಷಿಯು ಶಿಷ್ಯರೊಡಗೂಡಿ ಗಂಗಾನದಿಯ ತಟಾರದಲ್ಲಿ ಮಾಘಮಾಸ ವ್ರತವನ್ನಾಚರಿಸುತ್ತಾ ಹರಿಕಥಾ ಕಾಲಕ್ಷೇಪ ಮಾಡುತ್ತಿರಲು ಜುಹ್ನುವು ಮಾಘಮಾಸ ಪ್ರಧಾನವನ್ನು ಕೇಳಬೇಕೆಂದು ಇಚ್ಛಿಸಿದನು.

ಆಗ ಗೃತ್ಸನು ಋಷಿಗಳು ಜುಹ್ನುವನ್ನು ಕುರಿತು, ಹಿಂದೆ ಇಂದ್ರನು ತಾನು ಮಾಡಿದ ಪಾಪಕ್ಕಾಗಿ ಮಾಘಮಾಸ ಸ್ನಾನ ಮಾಡಿ ಶಾಪ ಕಳೆದುಕೊಂಡನಂತೆ ಎಂದು ಹೇಳುತ್ತಿರಲು, ಜುಹ್ನುವು ಗೃತ್ಸ ಋಷಿಗಳನ್ನು ಕುರಿತು ಮಹರ್ಷಿವರ್ಯರೇ ಇಂದ್ರನೇನಂತಹ ಪಾಪ ಮಾಡಿದ್ದನು ಎಂದರು. ಆಗ ಗೃತ್ಸ ಋಷಿಗಳು ಹೇಳತೊಡಗಿದರು.

ಕೃತಯುಗದಲ್ಲಿ ತುಂಗಭದ್ರಾ ನದಿ ತೀರದ ಆಶ್ರಮದಲ್ಲಿ ಮಿತ್ರವೃಂದನೆಂಬ ಮಹಾ ಮುನಿಯು ವಾಸವಾಗಿದ್ದನು. ಆತನ ಪತ್ನಿಯು ಸುಂದರ ವದನಳಾಗಿ, ದೊಡ್ಡ ನಿತಂಬದವಳಾಗಿ, ಘನ ಕುಚಗಳನ್ನೂ ಹೊಂದಿ ಕಾಮೋನ್ಮತ್ತಳಾಗಿದ್ದಳು. ಒಂದು ಬೆಳಗ್ಗೆ ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿ ತಲೆಯನ್ನು ಒಣಗಿಸಿಕೊಳ್ಳುತ್ತಾ ನಿಂತಿರಲು ದೇವೇಂದ್ರನು ಅದೇ ಮಾರ್ಗದಲ್ಲಿ ರಾಕ್ಷಸನ ಮೇಲೆ ಯುದ್ಧಕ್ಕೆ ಹೋಗುತ್ತಿದ್ದನು. ಮುನಿಪತ್ನಿಯನ್ನು ನೋಡಿ

...ಉಪಾಯ ತೋರಿದಿರಿ. ನನ್ನ ಮಿತ್ರರಾದ ಕಿರಾತ...
...ಉದ್ಧಾರ ಮಾಡುವ ಮಾರ್ಗ ತಿಳಿಸಿ ಎನಲು, ...
...ದ ಮಾರ್ಗವೇ ಅವರಿಗೂ ಅನುಕೂಲವಾಗುವುದು...
...ದಲಿ" ಎಂದು ಹೇಳಿದನು.

...ಖಲನು ವೀರವ್ರತನಿಗೆ ನಮಿಸಿ ಅಲ್ಲಿಂದ ಹೊರಟು...
...ತ್ರರಿಗೆ ಅವರ ಪಾಪದ ವಿವರವನ್ನು ತಿಳಿಸಿ, ಪ್ರಾಯಶ್ಚಿತ್ತ...
...ನು.

...ಲ್ಕು ಪಾತಕಿಗಳೂ ಬೇರೆ ಬೇರೆಯಾಗಿ ತೀರ್ಥ...
...ಡುತ್ತಾ, ದೇವಾಲಯಗಳನ್ನು ದರ್ಶಿಸುತ್ತಾ, ...
...ತಲುಪಿ, ಮಾಘಸ್ನಾನಾದಿಗಳನ್ನು ಮಾಡಿ, ಪರಮೇಶ್ವ...
...ರಡು ವರ್ಷಗಳನ್ನು ಕಳೆದರು. ಅವರ ಗತ ಪಾಪ...
...ರು.

...ನು ಹಾಗೆ ಮಾಡಿ ಮುಕ್ತಿಗಾಗಿ ಮತ್ತೆ ವೀರವ್ರತನಲ್ಲಿಗೆ...
...ರದನೆಯ ಅಧ್ಯಾಯ ಮುಗಿದುದು.

...ಸಿ, ಸದಾಚಾರದಿಂದ ಸಕಲರೂ ಸುಖಿಗಳಾಗುವರು.

ಅಧ್ಯಾಯ ಇಪ್ಪತ್ತಾರು

ಧರ್ಮಶಾಸ್ತ್ರ ವಿಚಾರ

ವಿಶೃಂಖಲನು ತೀರ್ಥಯಾತ್ರೆಗಳಿಂದ ಪರಿಶುದ್ಧನಾಗಿ ವೀರವ್ರತನಲ್ಲಿಗೆ ಬಂದು ನಮಸ್ಕರಿಸಿದನು.

ವೀರವ್ರತನು ಬ್ರಹ್ಮ ತೇಜಸ್ಸಿನಿಂದ ಮರಳಿದ ವಿಶೃಂಖಲನನ್ನು ಕುರಿತು, ನಿನ್ನ ಪಾಪಗಳು ನಶಿಸಿದವು. ಈಗ ನಿನಗೆ ನಾನು ಧರ್ಮದ ಉಪದೇಶವನ್ನು ನೀಡುವೆನು ಎಂದು ಹೇಳಿ, ದರ್ಭೆಗಳಿಂದ ಮಂತ್ರಪೂರ್ವಕ ಪ್ರೋಕ್ಷಣೆ ಮಾಡಿ ವೇದೋಕ್ತನಾಗಿ ಗೃಹಸ್ಥನಾಗುವಂತೆ ಉಪದೇಶವಿತ್ತನು.

"ಬ್ರಾಹ್ಮಣನೇ, ಸನಾತನ ಧರ್ಮವನ್ನು ಅವಲಂಬಿಸು. ಭಕ್ತಿಯಿಂದ ಸಜ್ಜನರ ಸೇವೆ ಮಾಡು. ನಿತ್ಯ ಕರ್ಮಗಳನ್ನು ಬಿಡಬೇಡ. ಇಂದ್ರಿಯಗಳನ್ನು ನಿಗ್ರಹಿಸಿ ಪರಮೇಶ್ವರನನ್ನು ಆರಾಧಿಸು. ಪರರ ತಪ್ಪುಗಳನ್ನು ಎಣಿಸಬೇಡ. ಪರಸ್ತ್ರೀಯನ್ನು ತಾಯಿಯಂತೆ ಭಾವಿಸು. ಅತಿಥಿಗಳನ್ನು ಸತ್ಕರಿಸು. ನಿತ್ಯ ಕರ್ಮಗಳನ್ನು ತಪ್ಪದೇ ಆಚರಿಸು. ಚಾಡಿ ಮಾತುಗಳನ್ನು ಹೇಳಬೇಡ, ಕೇಳಬೇಡ. ರಾಮಾಯಣ, ಮಹಾಭಾರತ, ಭಾಗವತ ಪುರಾಣಗಳನ್ನು, ಧರ್ಮಶಾಸ್ತ್ರವನ್ನೂ ನಿರಂತರ ವ್ಯಾಸಂಗಮಾಡು. ತುಳಸಿಯನ್ನು ಪೂಜಿಸು. ಪ್ರತಿದಿನ ತುಳಸೀ ತೀರ್ಥವನ್ನು ಸೇವಿಸು. ದೇವರಿಗೆ ನೈವೇದ್ಯ ಮಾಡದೆ ಊಟ ಮಾಡಬೇಡ. ಮನೆಗೆ ಬಂದ ಅತಿಥಿಗಳಿಗೆ, ಯತಿಗಳಿಗೆ, ಯೋಗೀಶ್ವರರಿಗೆ, ಬ್ರಹ್ಮಚಾರಿಗಳಿಗೆ, ದೀನರಿಗೆ ಯೋಗ್ಯ ರೀತಿಯಲ್ಲಿ ಸೇವೆ ಮಾಡು. ತಂದೆ ತಾಯಿಗಳ ಸೇವೆಯನ್ನೂ ಶ್ರದ್ಧೆಯಿಂದ ಮಾಡು. ನಿತ್ಯ ಅಗ್ನಿಹೋತ್ರವನ್ನು ಆಚರಿಸು. ಕಾಮ ಕ್ರೋಧಾದಿಗಳನ್ನು ನಾಶಮಾಡು. ಈ ಜಗತ್ತಿನ ಪುಣ್ಯ ಪಾಪಗಳಿಗೆಲ್ಲಾ ಮನಸ್ಸೇ ಕಾರಣ. ಆ ದು ದ ರಿ ಂ ದ ಮನಸ್ಸನ್ನು ನಿಗ್ರಹಿಸು.

...ಲ್ಲೀಳಿದ. ಕುಮುದಳು ಬಲವಂತದಿಂದ ಆತನನ್ನು
...ಬ್ರಾಹ್ಮಣ ಸ್ನಾನಮಾಡಿ ಶ್ರೀರಂಗದ ಕಡೆ ನಡೆದ.

...ಮುಂದ, ಕುಮುದಳು ಮರಣಿಸಿದರು. ದೇವ
...ಜರಾದರು. ದೇವದೂತರು ಕುಮುದಳನ್ನು
...ಕು ಹೊರಡಲನುವಾದರು. ಯಮದೂತರು
...ೂರಡುತ್ತಲಿರಲು. ದೇವದೂತರು "ಅಯ್ಯಾ
...ೀವೇಕೆ ಕೊಂಡೊಯ್ಯಲು ಬಂದಿರಿ. ಏನು ಪಾಪ
...ಯಮ ಕಿಂಕರರು ಈತ ಮಹಾ ಲೋಭಿಯಾಗಿ
... ಮಾಡಿಲ್ಲ. ಎಲ್ಲರನ್ನು ಮೋಸಗೊಳಿಸಿ ಹಣ
...ನ್ನು ವಿಕ್ರಯಿಸಿದ್ದಾನೆ. ತಾನೂ ತಿನ್ನದೆ ಪರ
...ನೆ. ಪುಣ್ಯ ಕಾರ್ಯವೆಸಗುವ ಹೆಂಡತಿಯನ್ನು

...ಲ್ಲಾ ಸರಿಯೇ ಆದರೆ ಆತನು ಮಾಘಸ್ನಾನ
...ತಿರಾ. ಇಚ್ಛೆಯಿಂದಲೋ ಬಲವಂತದಿಂದಲೊ
...ಲ್ಲ ಪಾಪಗಳು ಪರಿಹಾರವಾಗುವುದು ನಿಮಗೆ
...ದರಿಸಿದರು. ಯಮ ಭಟರು ಸುಮಂದನನ್ನು

...ದೇವಲೋಕವನ್ನು ಸೇರಿ ಶಾಶ್ವತ ಸುಖ
...ಾಯವು ಮುಗಿದುದು.

...ದ ಒಳ್ಳೆಯದಾಗುವುದು ಖಚಿತ.

ಅಧ್ಯಾಯ ಏಳು

ಮಾಘ ಸ್ನಾನದಿಂದ ರಾಕ್ಷಸನ ಜನ್ಮ ಮುಕ್ತಿ

ಹಿಂದೆ ದ್ವಾಪರ ಯುಗದಲ್ಲಿ ಗೋದಾವರಿ ತೀರದಲ್ಲಿ ಒಂದು ಅಗ್ರಹಾರ. ಅಲ್ಲಿ ಸುಶೀಲನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನು ವೇದ ವೇದಾಂಗ ಪಾರಂಗತನು ಸಚ್ಚರಿತ್ರನು. ಆತ ಒಂದು ಸಲ ದೇಶ ಪರ್ಯಟನೆಗಾಗಿ ಹೊರಟನು. ಮಾರ್ಗ ಮಧ್ಯದಲ್ಲಿ ಒಂದು ದೊಡ್ಡ ಅಡವಿಯನ್ನು ಸೇರಿದನು. ಅಡವಿಯೋ ಬಹಳ ದುರ್ಗಮವಾಗಿದ್ದಿತು. ಹುಲಿ, ಚಿರತೆ, ಕರಡಿ, ತೋಳಗಳಿಂದ ಕೂಡಿದ ಭಯಂಕರ ಕಾಡಾಗಿತ್ತು. ಅಲ್ಲದೆ ಗಿಡ ಮುಳ್ಳು ಪೊದೆಗಳಿಂದ ಭೇಧಿಸಲು ಅಸಾಧ್ಯವಾಗಿತ್ತು. ಅಲ್ಲಿ ನಡೆದು ಬರುತ್ತಿರಲು ಭಯಂಕರವಾದ ಒಂದು ರಾಕ್ಷಸನನ್ನು ಕಂಡನು. ಆ ರಾಕ್ಷಸನ ಆಕಾರವು ವಿಕಾರವಾಗಿಯೂ ಅವನ ಕೈಗಳುಜಾಲಿಯ ಕೊಂಬೆಗಳಂತೆಯೂ, ಕಾಲುಗಳು ಜಾಲೀ ಮರದಲ್ಲೇ ಹೊಕ್ಕಿರುವಂತೆಯೂ, ಮೈಮೇಲೆಲ್ಲಾ ಜಾಲಿ ಮುಳ್ಳುಗಳು ಚುಚ್ಚಿ ರಕ್ತ ಸುರಿಯುತ್ತಲೂ ವಿಕಾರ ಸ್ವರದಿಂದ ಅರಚುತ್ತಿದ್ದನು.

ಸುಶೀಲನು ಆ ರಾಕ್ಷಸನನ್ನು ನೋಡಿ ಭಯಪಟ್ಟನು. ಮತ್ತೆ ಹರಿಸ್ಮರಣೆ ಮಾಡಿದರೆ ಭಯವಿರದು ಎಂದು ತಿಳಿದು, ದೈವಸ್ಮರಣೆ ಮಾಡುತ್ತಾ ರಾಕ್ಷಸನನ್ನೊಮ್ಮೆ ನೋಡಿದನು. ರಾಕ್ಷಸನ ಆರ್ತನಾದ, ಹೀನ ಪರಿಸ್ಥಿತಿ ಕಂಡು ಮರುಗಿದನು. ಧೈರ್ಯದಿಂದ ರಾಕ್ಷಸನನ್ನು ಕುರಿತು ಅಯ್ಯಾ ನೀನಾರು ? ನಿನಗೇಕೆ ಈಗತಿ ಬಂದಿತು ಎಂದು ಕೇಳಿದನು.

ರಾಕ್ಷಸನು ವಿಪ್ರನ ಮಾತಿನಿಂದ ಶಾಂತನಾದಂತೆ ಕಂಡನು. "ವಿಪ್ರೋತ್ತಮಾ ನಿನ್ನ ಮಾತನ್ನು ಕೇಳಿ ನನಗೆಷ್ಟೋ ಬಾಧೆ ಕಡಿಮೆಯಾಯಿತು. ನನ್ನ ವಿಷಯವನ್ನು ಹೇಳುತ್ತೇನೆ ಕೇಳು."

ಹಿಂದೆ ನಾನು ಗೋಕರ್ಣದಲ್ಲಿದ್ದೆ. ನಾನು ಬ್ರಾಹ್ಮಣಕುಲದಲ್ಲಿ ಜನಿಸಿದ್ದೆ. ಗ್ರಾಮಾಧಿಕಾರಿಯಾಗಿ ಜೀವನ ಸಾಗಿಸುತ್ತಿದೆ. ಬ್ರಾಹ್ಮಣರಿಗೆ ಸುಳ್ಳು

ಈ ಮಾಘಮಾಸದ ಮಹಿಮೆಯನ್ನು ಓದುವವರು, ಕೇಳುವವರು ಪಾಪಗಳಿಂದ ಮುಕ್ತರಾಗಿ ಪುಣ್ಯಲೋಕವನ್ನು ಸೇರುವರು ಎಂಬಲ್ಲಿಗೆ ಹನ್ನೆರಡನೆಯ ಅಧ್ಯಾಯ ಮುಗಿದುದು.

ನೀತಿ : ಸದ್ಕರ್ಮಗಳು ಶುಭಫಲಗಳನ್ನು ನೀಡುತ್ತವೆ.

ಅಧ್ಯಾಯ ಹದಿಮೂರು

ಪಿಶಾಚಿಯ ಜನ್ಮನಾಶ

ಹಿಂದೆ ಪಂಪಾ ತೀರದಲ್ಲಿ ಸಮಸ್ತ ರಾಜರಿಗೂ ಆಶ್ರಯವಾಗಿದ್ದ ಪಂಪಾ ನಗರದಲ್ಲಿ, ಅತ್ಯಂತ ಧನಿಕನಾದ ವೈಶ್ಯನೊಬ್ಬನಿದ್ದನು. ಆತನು ಜೀವಿತ ಕಾಲ ದಲ್ಲಿ ಎಂದೂ ಯಾರಿಗೂ ದಾನ ಧರ್ಮಗಳನ್ನು ಮಾಡಿದವನಲ್ಲ. ಬಡ್ಡಿಗೆ ಹಣವಿತ್ತು, ಪರರ ಸ್ವತ್ತನ್ನೂ ತನ್ನದಾಗಿಸಿಕೊಂಡು ವ್ಯವಹಾರದಲ್ಲಿ ವಂಚನೆ ಯಿಂದ ಹಣಗಳಿಸಿ, ತನ್ನ ಸುಖವನ್ನೇ ತಾನು ಪಡುತ್ತಾ, ಸ್ವಾರ್ಥಿಯಾಗಿ, ಲೋಭಿಯಾಗಿ, ಯಾವೊಂದೂ ಪುಣ್ಯ ಕಾರ್ಯವನ್ನೂ ಮಾಡದೆ ಮರಣಿಸಿ, ನರಕವನ್ನು ಸೇರಿದನು. ನರಕಯಾತನೆಪಟ್ಟು, ಕಡು ಬಡವನಾಗಿ ಭೂಲೋಕ ದಲ್ಲಿ ಹುಟ್ಟಿ ದಾರಿದ್ರ್ಯಾವಸ್ಥೆಯಲ್ಲಿ ಅನೇಕ ಪಾಪಗಳನ್ನು ಮಾಡಿದನು.

ಆ ಪಾಪದ ಫಲದಿಂದ ಸಿಡಿಲು ಬಡಿದು ಸತ್ತನು. ಸತ್ತ ನಂತರ ಅದೇ ಪಂಪಾ ತೀರದಲ್ಲಿ ಒಂದು ಆಲದ ಮರದಲ್ಲಿ ಪಿಶಾಚಿಯಾಗಿ ಸೇರಿಕೊಂಡನು. ಸುತ್ತಮುತ್ತಲಿನ ಜನರನ್ನು ಹೆದರಿಸುತ್ತಾ, ಅಲ್ಲಲ್ಲಿ ಸಂಚರಿಸುತ್ತಾ ಕಾಲ ತಳ್ಳುತ್ತಿದ್ದನು.

ಒಂದು ದಿನ ಬ್ರಹ್ಮ ಮಾನಸಪುತ್ರರಾದ ವಸಿಷ್ಠರು ಆ ಪಂಪಾ ತಟಕ್ಕೆ ಬಂದರು. ಆಗ ಮಾಘ ಮಾಸವಾಗಿತ್ತು. ಮುನಿಗಳು ಪಂಪಾ ನದಿಯಲ್ಲಿ

ಮುಂಜಾನೆಯೇ ಸ್ನಾನ ಮಾಡಿ, ಶಿವನಾಮವನ್ನು ಸ್ಮರಿಸುತ್ತಾ ಕಠಕಠನ ಮುಳುಗಿ ಮಾಘವ್ರತಾಚರಣೆಯಲ್ಲಿ ಮುಳುಗಿದ್ದರು. ದೇವತೆಗಳು ಇಲ್ಲಿ ಬಂದು ಮುನಿವರ್ಯರೇ, ನೀವು ಇಲ್ಲಿ ಮಾಡುತ್ತಿರುವ ವ್ರತ ಯಾವುದು? ಇದರ ಫಲವೇನು? ಎಂದು ಕೇಳಲು, ಮುನಿಗಳು ದೇವತೆಗಳಿಗೆ ಇದು ಮಾಘ ಮಾಸ ವ್ರತವು ಇದನ್ನು ಯಾರು ಶ್ರದ್ಧೆಯಿಂದ ಆಚರಿಸುತ್ತಾರೋ, ಅವರ ಪಾಪಗಳು ಭಸ್ಮವಾಗಿ ದೇವಲೋಕವನ್ನು ಸೇರುತ್ತಾರೆ. ಸೂರ್ಯನು ಮಕರರಾಶಿಯಲ್ಲಿರುವಾಗ ಸೂರ್ಯೋದಯಕ್ಕೆ ಮುಂಚೆ ಎದ್ದು, ಗಂಗಾ ಕಾವೇರಿಯಂತಹ ಪುಣ್ಯ ನದಿಗಳಲ್ಲಿ ಸ್ನಾನ ಮಾಡಿ, ಮಾಘಶುದ್ಧ ಚತು ಪೌರ್ಣಮಿ ದಿನಗಳಲ್ಲಿ ಜಪತಪವನ್ನಾಚರಿಸಿ ಗೋದಾನ, ಭೂದಾನ, ತಿಲದಾನ ಅನ್ನದಾನ, ಪಾಯಸದಾನ, ವಸ್ತ್ರದಾನ ಮಾಡುವವರು, ಈ ಭವದ ಪಾಪಗಳಿಂದ ಪಾರಾಗಿ ಶಿವಸಾಯುಜ್ಯವನ್ನು ಪಡೆಯುತ್ತಾರೆ. ಅಧ್ಯಾತ್ಮ ನಿರತರಾದ ಮುನಿಗಳಿಗೂ ಗೃಹಸ್ಥರಿಗೂ ಈ ವ್ರತವು ಅತ್ಯಂತ ಶ್ರೇಷ್ಠವಾದುದು. ಭಕ್ತಿ ಶ್ರದ್ಧೆಯಿಂದ ಆಚರಿಸಿದರೆ ಅಧಿಕ ಫಲವುಂಟು.

ರೋಗಗ್ರಸ್ತರು, ಮುದುಕರು, ಹುಡುಗರು, ಸ್ತ್ರೀಯರು ಹೊರತು ಯಾರೇ ಆಗಲಿ ಮಾಘಸ್ನಾನ ಮಾಡದಿದ್ದರೆ ಚಂಡಾಲರಾಗಿ ಹುಟ್ಟುತ್ತಾರೆ. ಮಾಘ ವ್ರತದಲ್ಲಿ ಆಸಕ್ತನಾದವನು ಚಂಡಾಲನಾದರೂ, ಪೂಜಿಸಲ್ಪಡುತ್ತಾನೆ.

ಆದುದರಿಂದ ನಾವು ಈ ವ್ರತವನ್ನು ಆಚರಿಸುತ್ತಿದ್ದೇವೆ. ನೀವೂ ಈ ವ್ರತವನ್ನಾಚರಿಸಿ ದೇವರನ್ನು ಒಲಿಸಿಕೊಳ್ಳಬಹುದು ಎಂಬುದಾಗಿ ದೇವತೆಗಳಿಗೆ ಹೇಳಿದರೆಂಬಲ್ಲಿಗೆ ಒಂಭತ್ತನೇ ಅಧ್ಯಾಯ ಮುಗಿದುದು.

ನೀತಿ : ದೇವತೆಗಳಿಗೂ ಸಹ ತಪ್ಪಿಗೆ ಶಿಕ್ಷೆ ಅನುಭವಿಸಲೇಬೇಕು

ಬರಲು ಹೇಳಿದನು. ನಾನು ನನ್ನ ಗರ್ವ
ಾಘಮಾಸದ ಚಳಿಯಲ್ಲಿ ನಾನು ನದಿಯಲ್ಲಿ
ೀರಿನ ಸ್ನಾನ ಹಿಡಿಸದು. ಚಳಿಯನ್ನು ನಾನು
ರ ಮೇಲೆ ನೀವು ಹೇಳಿದಂತೆ ಪೂಜೆಗೆ ಆಣಿ
ಾನು ಮಾಡುವುದಿಲ್ಲ. ಎಂದು ನಿಷ್ಠುರವಾಗಿ
ಯಾದ ನನ್ನ ಪತಿಗೆ ನನ್ನ ಮಾತಿನಿಂದ

ಯೆ, ತಂದೆಯು ಮಾತನ್ನು ಕೇಳದ
ಾಡುವ ಪತ್ನಿಯೂ ದಂಡನೆಗೆ ಅರ್ಹರು.
ಕಪ್ಪೆಯಾಗಿ ಒಟಗುಟ್ಟುತ್ತಿರು ಎಂದು
ಪ್ಪಿನ ಅರಿವಾಯಿತು. ಆತನ ಪಾದಗಳ
ು ಮಹಾಪರಾಧವೆಂದೂ ನನ್ನ ಪಾಪ
ಕೇಳಿಕೊಂಡೆ. ಆಗ ಆತನು ಯಾವಾಗ
ರ್ಶನವಾಗುವುದೋ, ಯಾವಾಗ ನೀನು
ಹಿಮೆಯನ್ನು ಕೇಳುವಿಯೋ ಆಗ ನಿನಗೆ
ಂದು ಹೇಳುತ್ತಿದಂತೆ ನಾನು ಕಪ್ಪೆಯಾಗಿ
ಕೃಷ್ಣವೇಣಿ ತೀರಕ್ಕೆ ಬಂದೆ. ಈ ಅಶ್ವತ್ಥ
ವು ಬಂದು ಇಲ್ಲಿ ಮಾಘ ಪುರಾಣವನ್ನು
ಾನು ಹೊರಕ್ಕೆ ಬಂದೆ. ನಿಮ್ಮ ದರ್ಶನ
. ನಿಮ್ಮಿಂದ ನಾನು ಉದ್ಧಾರವಾದೆ.

ನ್ನ ನುಡಿಯಿಂದ ಒಂದಂಶವಂತೂ
ಚನವನ್ನು ಮೀರಬಾರದು. ಹೆಂಗಸು
ೂ ವೇದಗಳು ಉಪನಿಷತ್ತುಗಳೂ
ರಿಬ್ಬರೂ ಸರಿಸಮಾನರು. ಸ್ತ್ರೀ

ದುರ್ನಡತೆಯಲ್ಲಿದ್ದರೆ ತಿದ್ದುವುದು ಪತಿಯ ಕರ್ತವ್ಯ. ಪತಿಯು ದುರ್ಮಾಗನಾದಾಗ ಸತಿಯು ಆತನನ್ನು ಸರಿ ಪಡಿಸಬೇಕಾದ್ದು ಸತಿಯ ಧರ್ಮ. ಸತಿಪತಿಗಳಿಬ್ಬರೂ ಎರಡು ಕಣ್ಣುಗಳಿದ್ದಂತೆ ಯಾವುದಕ್ಕೂ ಕುಂದಾದರೂ ಕುಂದೇ. ನಿನ್ನ ಪತಿ ದೇವರು ಅತಿ ಬುದ್ಧಿವಂತ ಹಾಗೂ ಕರುಣಾಳುವು. ನೀನು ಮಾಘಸ್ನಾನಾದಿಗಳನ್ನು ಮಾಡಿ ಕೃತಕೃತ್ಯಳಾಗಲು ಹಿತವನ್ನೇ ನುಡಿದ. ನೀನಾದರೋ ಆತನನ್ನೇ ಧಿಕ್ಕರಿಸಿದೆ. ಆತನಿಗೆ ಸಹಜವಾಗಿಯೇ ಕೋಪ ಬಂದು ನೀನು ನೀರಿಲ್ಲದೆ ನರಳುವಂತೆ ಶಾಪವಿತ್ತ.

ಈಗ ನೀನು ಮಾಘ ಮಾಸ ವ್ರತ ಮಹಿಮೆ ಕೇಳಿ ದಿವ್ಯ ಶರೀರಳಾಗಿರುವೆ. ಈಗಲಾದರೂ ನೀನು ಮಾಘ ಸ್ನಾನ ಮಾಡಿ ಪಾಪಗಳೆಲ್ಲವು ಪರಿಹಾರವಾಗುವಂತೆ ವರ್ತಿಸು. ಪತಿಯ ಸೇವೆಯಲ್ಲಿ ನಿನ್ನ ಜನ್ಮ ಸಾರ್ಥಕಗೊಳಿಸು ಎಂದು ಹಿತವಚನ ನುಡಿದನು.

ಆಗ ಮುನಿ ಪತ್ನಿಯು ಸಂತಸದಿಂದ ಮಾಘಸ್ನಾನ ಮಾಡಿ, ವಿಶ್ವೇಶ್ವರನನ್ನು ಪೂಜಿಸಿ ತನ್ನ ಪತಿಯನ್ನು ಸೇರಿ, ಸೇವೆಗೈದು ಕಡೆಗೆ ಶಿವಸಾಯುಜ್ಯವನ್ನು ಪಡೆದಳು.

ರಾಜನು ನಾಯಿಜನ್ಮ ಕಳೆದು ಕೃತಾರ್ಥನಾದನು. ಮಾಘಮಾಸದಲ್ಲಿ ತಿಳಿದೊ ತಿಳಿಯದೆಯೋ ಮಾಘಸ್ನಾನ ಮಾಡಿ ದಾನ ಧರ್ಮಗಳನ್ನು ಮಾಡಿದ್ದೇ ಆದರೆ ಗತಪಾಪಗಳೆಲ್ಲವೂ ಸುಟ್ಟು ಬೂದಿಯಾಗಿ ಪ್ರಕಾಶರೂಪನಾದ ಪರಮಾತ್ಮನಲ್ಲಿ ಐಕ್ಯವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಎಂಬಲ್ಲಿಗೆ ಐದನೆಯ ಅಧ್ಯಾಯವು ಮುಗಿದುದು.

ನೀತಿ: ಪೂಜ್ಯರ, ಹಿರಿಯರ ಮಾರ್ಗದರ್ಶನ ಅಲ್ಲ ಗೆಳೆಯಬಾರದು.

ಅಧ್ಯಾಯ ಆರು

ಬಲವಂತ ಮಾಘ ಸ್ನಾನದಿಂದಲೂ ಮುಕ್ತಿ

ಮಾಘ ಸ್ನಾನದ ಮಹಿಮೆ ಅಷ್ಟಿಷ್ಟಲ್ಲ. ತಿಳಿದೋ ತಿಳಿಯದೆಯೋ ಬೇಕೆಂದೋ ಬೇಡವೆಂದೋ ಅಥವಾ ಬಲವಂತದಿಂದಲೋ ಮಾಘಮಾಸದಲ್ಲಿ

ಕರೆದುಕೊಂಡು ವಿದ್ಯಾಧರನ ಬಳಿಗೆ ಬಂದು, ಆತ
ಯನ್ನು ವಿವಾಹವಾದನು. ಮಾವನಿಗೆ ವಂದಿಸಿ ಹೆಂಡತಿ
ಸ್ಯ ಸೇರಿದನು. ಗಂಡ ಹೆಂಡಿರಿಬ್ಬರೂ ಜೀವನವಿಡೀ
ತ್ತಾ, ಕಡೆಯಲ್ಲಿ ದೇವಲೋಕವನ್ನು ಸೇರಿದರು ಎಂಬಲ್ಲಿಗೆ
ಥೆ ಮುಗಿದುದು.

: ಎಲ್ಲವುದಕ್ಕೂ ದೈವಾನುಗ್ರ ಬೇಕು

ಅಧ್ಯಾಯ ಒಂಭತ್ತು

ಗೆ ರತಿದೋಷ ಗಾರ್ಧಭರೂಪ

ವೇದಾಂಗ ಪಾರಂಗತನಾದ ಗೃತ್ಸಮ ಮಹರ್ಷಿಯು
ದಿಯ ತಟಾರದಲ್ಲಿ ಮಾಘಮಾಸ ವ್ರತವನ್ನಾಚ
ಕ್ಷೇಪ ಮಾಡುತ್ತಿರಲು ಜುಹ್ನುವು ಮಾಘಮಾಸ
ಂದು ಇಚ್ಛಿಸಿದನು.

ಗಳು ಜುಹ್ನುವನ್ನು ಕುರಿತು, ಹಿಂದೆ ಇಂದ್ರನು
ಮಾಘಮಾಸ ಸ್ನಾನ ಮಾಡಿ ಶಾಪ ಕಳೆದು
ತ್ತಿರಲು, ಜುಹ್ನುವು ಗೃತ್ಸ ಋಷಿಗಳನ್ನು ಕುರಿತು
ೇನಂತಹ ಪಾಪ ಮಾಡಿದ್ದನು ಎಂದರು. ಆಗ
ಿಗಿದರು.

ಂಗಭದ್ರಾ ನದಿ ತೀರದ ಆಶ್ರಮದಲ್ಲಿ ಮಿತ್ರವೃಂದ
ವಾಸವಾಗಿದ್ದನು. ಆತನ ಪತ್ನಿಯು ಸುಂದರ
ದವಳಾಗಿ, ಘನ ಕುಚಗಳನ್ನೂ ಹೊಂದಿ ಕಾಮೋ
ಬೆಳಗ್ಗೆ ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿ
ತ್ತಾ ನಿಂತಿರಲು ದೇವೇಂದ್ರನು ಅದೇ ಮಾರ್ಗದಲ್ಲಿ
ಹೋಗುತ್ತಿದ್ದನು. ಮುನಿಪತ್ನಿಯನ್ನು ನೋಡಿ

ದೇವೇಂದ್ರನು ಮೋಹಗೊಂಡನು. ಹೇಗಾದರೂ ಮಾಡಿ ಆಕೆಯ ಸಹವಾಸ ಪಡೆಯಬೇಕೆಂದು ಆಶಿಸಿದನು. ಯುದ್ಧ ಮುಗಿಸಿ ವಾಪಸ್ಸು ಬರುವಾಗ ಮುನಿಯಾಶ್ರಮದ ಬಳಿ ಇಳಿದನು. ಮುನೀಶ್ವರನು ಅವನ ಪತ್ನಿಯೂ ಮಲಗಿದ್ದರು. ಇಂದ್ರನು ಕಿಂಡಿಯಲ್ಲಿ ಇಣುಕಿನೋಡುತ್ತಾ ಸಮಯ ಕಾಯುತ್ತಿದ್ದನು. ಬೆಳಗಿನ ಝಾವ ಮುನಿಯು ಎದ್ದು ಶಿಷ್ಯರಿಗೆ ಪಾಠ ಹೇಳಲು ಹೊರಟನು. ಅದೇ ಸಮಯಕ್ಕೆ ಇಂದ್ರನು ಒಳಹೊಕ್ಕು ಮುನಿಪತ್ನಿಯನ್ನೂ ಗಟ್ಟಿಯಾಗಿ ಹಿಡಿದುಕೊಂಡು ಆಕೆಯ ಮನವೊಲಿಸಿ ಆಲಂಗಿಸಿ, ಚುಂಬಿಸಿ, ರತಿಕ್ರೀಡೆಯಲ್ಲಿ ತೊಡಗಿದನು. ತನ್ನ ಆಸೆ ತೀರಲು ಮೇಲೆದ್ದು ಹೊರಡಬೇಕೆನ್ನುವಷ್ಟರಲ್ಲಿ ಮುನಿಯು ಆಶ್ರಮದ ಒಳಗೆ ಬಂದನು. ದೇವೇಂದ್ರನನ್ನೂ ತನ್ನ ಪತ್ನಿಯನ್ನೂ ನೋಡಿದನು. ಮನಸ್ಸಿಗೆ ಬೇಸರವಾಗಿ, ಛೀ, ಕಾಮದಾಸೆಯಿಂದ ಬಂದ ನೀನು ಗಾರ್ಧಭ ಮುಖವನ್ನು ತಾಳಿ, ನಾಲಿಗೆ ಚಾಚುತ್ತ ಇರು ಎನ್ನುತ್ತಲೇ. ಇಂದ್ರನು ಗಾರ್ಧಭ ಮುಖಹೊಂದಿ ಹೊರಟು ಹೋದನು. ಹೆಂಡತಿಯನ್ನು ಕಲ್ಲಾಗೆಂದು ಶಪಿಸಿ ಅಲ್ಲಿಂದ ಹೊರಟು ಗಂಗಾತೀರವನ್ನು ಸೇರಿ ಆತ್ಮ ತತ್ವವನ್ನು ಚಿಂತಿಸುತ್ತಾ ಜೀವತೊರೆದನು.

ಇಂದ್ರನು ಕತ್ತೆಯ ಮುಖವನ್ನು ಪಡೆದು ಕಿವಿಗಳನ್ನು ಮೇಲಕ್ಕೆತ್ತಿ, ಹಸಿವನ್ನು ನೀಗಿಕೊಳ್ಳಲು ಹುಲ್ಲುಕಡ್ಡಿಗಳನ್ನು ತಿಂದು ಅವಮಾನದಿಂದ ಪದ್ಮಪರ್ವತದ ಗುಹೆಯಲ್ಲಿ ಕಾಲಯಾಪನೆ ಮಾಡುತ್ತಿದ್ದನು. ಇದೇ ರೀತಿ ಹನ್ನೆರಡು ವರ್ಷಗಳೇ ಉರುಳಿದವು. ಸರಿಯಾದ ಸಮಯವೆಂದು ರಾಕ್ಷಸರು ಅಮರಾವತಿಗೆ ಮುತ್ತಿಗೆ ಹಾಕಿದರು. ದೇವತೆಗಳೂ ರಾಕ್ಷಸರೂ ಹಣಾಹಣಿಯಾಗಿ ಹೋರಾಡಿದರು. ತಮ್ಮ ರಾಜನೆಲ್ಲಿ ಹೋದನೋ ಎಂದು ಹುಡುಕಿಕೊಂಡು ಹೊರಟರು. ಎಲ್ಲಿಯೂ ಕಾಣದೆ ಮತ್ತೆ ಸ್ವರ್ಗಕ್ಕೇ ಹಿಂತಿರುಗಿದರು.

ಯುದ್ಧ ಸಾಗುತ್ತಲೇ ಇತ್ತು. ಇಂದ್ರನನ್ನು ಹೇಗಾದರೂ ಹುಡುಕಿ ಕರೆತರಲೇಬೇಕೆಂದು ಕೆಲವರು ಸಮುದ್ರ ತೀರಗಳಲ್ಲೂ, ಕೆಲವರು ನದೀ ತಟಾರಗಳಲ್ಲೂ ಅಲೆಯುತ್ತಿದ್ದರು. ಮಾಘಮಾಸವು ಸಮೀಪಿಸಿದ್ದರಿಂದ, ಕೆಲವರು ದೇವಋಷಿಗಳು ಸಮುದ್ರ ನದೀ ತಟಾರಗಳಿಗೆ ಬಂದು ಸೂರ್ಯೋದಯಕ್ಕೆ

ಫಲಗಳೇ ನಿನ್ನನ್ನು ಮತ್ತೆ ಮನುಷ್ಯನನ್ನಾಗಿ ಮಾಡಿದೆ. ನೀನು ಈಗಲಾದರೂ ಮಾಘಸ್ನಾನ ಮಾಡಿ ಮಾಘ ವ್ರತವಾಚರಿಸಿ ಸರ್ವೇಶ್ವರನನ್ನು ಪೂಜಿಸು. ಕೃತಾರ್ಥನಾಗುವೆ ಎಂದರು. ರಾಜನು ಮುನಿಗಳಿಗೆ ವಂದಿಸಿ ಅಲ್ಲಿಂದ ನಡೆದನು.

ಮತ್ತೆ ಮಾಘ ಪೂಜೆಯಲ್ಲಿ ಗೌತಮರು ಕುಳಿತರು. ವಟಗುಟುತ್ತಾ ಕಪ್ಪೆಯೊಂದು ಮರದ ಪೊಟರೆಯಿಂದ ಹೊರಕ್ಕೆ ಬಂದು ಚಿಪ್ಪನ್ನು ತೊರೆದು ಸ್ತ್ರೀರೂಪ ತಾಳಿತು. ಮುನಿಕುಮಾರರೂ ಗೌತಮರೂ ಆತ್ಯಾಶ್ಚರ್ಯದಿಂದ ನೋಡುತ್ತಿರಲು ಆ ಸ್ತ್ರೀ ಗೌತಮರನ್ನು ವಂದಿಸುತ್ತಾ ನಿಂತಳು ಎಂಬಲ್ಲಿಗೆ ನಾಲ್ಕನೆಯ ಅಧ್ಯಾಯವು ಮುಗಿದುದು.

ನೀತಿ: ಅಲ್ಪ ದೋಶಗಳೂ ಆಗದಂತೆ ನಿಯಮವಾಚರಿಸಬೇಕು.

ಅಧ್ಯಾಯ ಐದು

ಪತಿ ವಚನ ಧಿಕ್ಕರಿಸಿ ಮಂಡೂಕಳಾದಳು

ಗೌತಮ ಮುನಿಯು ಆ ಸ್ತ್ರೀಯನ್ನು ಕುರಿತು ತಾಯೆ, ನೀನಾರು. ನಿನಗೇಕೆ ಈ ಕಪ್ಪೆಯ ಜನ್ಮ ಬಂದಿತು ಎಂದು ಕೇಳಲು. ಆಕೆಯು ಮಹಾತ್ಮ ನಾನು ಜ್ಞಾನಸಿದ್ಧಿ ಎಂಬ ಮುನಿಯ ಮಗಳು. ಪ್ರಜಾ ಮುನಿಯೆಂಬುವನ ಪತ್ನಿಯಾಗಿದ್ದೆನು. ನಾವುಗಳು ಕಾವೇರಿ ತೀರದ ಆಶ್ರಮದಲ್ಲಿ ವಾಸವಾಗಿದ್ದೆವು. ನನ್ನ ಪತಿಯಾದರೋ ಮಹಾ ತಪಸ್ವಿ ದಯಾಮಯನು. ಸಕಲ ಜೀವರಾಶಿಗಳಲ್ಲಿ ಅಪಾರ ಪ್ರೀತಿಯಿದ್ದವನು. ಎಂದೂ ಯಾರ ಮನಸ್ಸನ್ನೂ ನೋಯಿಸರಿಯನು. ನಾವು ಅಲ್ಲಿಯೇ ಸಂಸಾರ ಮಾಡಿಕೊಂಡಿದ್ದೆವು. ಆಗ ಮಾಘಮಾಸವು ಪ್ರಾಪ್ತಿಯಾಯಿತು. ನನ್ನ ಪತಿಯು ನನ್ನನ್ನು ಕುರಿತು, ನದೀ ತೀರದಲ್ಲಿ ಸಾರಿಸಿ ಗುಡಿಸಿ ರಂಗೋಲಿಯನ್ನಿಟ್ಟು ಸರ್ವೇಶ್ವರನ ಪೂಜೆಗೆ ಅಣಿ ಮಾಡಲು ನುಡಿದನು. ಅದೂ ಅಲ್ಲದೆ ಬೆಳಗ್ಗೆ

[illegible] ಎಂದು ವಿಷ್ಣುವು [illegible]

[illegible]

ನೀತಿ : ದೇವ, ಮಾನವರೂ ಸಹ ಅಹಂಕಾರದಿಂದ [illegible]
[illegible]

ಅಧ್ಯಾಯ ಹದಿನೇಳು

ವಿಪ್ರನಿಗೆ ಪುತ್ರ ಪ್ರಾಪ್ತಿ

ಗೃತ್ಸಮದ ಮುನಿಯು [illegible] ಮುನಿಯನ್ನು ಕುರಿತು [illegible], ಮಾಘಸ್ನಾನದ ಮತ್ತು ಮಾಘದ ಮಹಿಮೆಯನ್ನು ತಿಳಿಸುತ್ತಿದ್ದೇನೆ, ಕೇಳು [illegible]. ಹರಿಯು [illegible] ತಿಳಿದಿರುವುದರಿಂದ [illegible] [illegible]. [illegible] ಧರ್ಮವನ್ನು [illegible] ಬಗೆಗೆ ತಿಳಿಸುತ್ತೇನೆ.

ಹಿಂದೆ ಗಂಗಾತೀರದಲ್ಲಿ ಸತ್ಯವ್ರತನೂ, [illegible] [illegible] ಬ್ರಾಹ್ಮಣೋತ್ತಮನಿದ್ದನು. [illegible] ತನ್ನ ಪತ್ನಿಯನ್ನು ಕುರಿತು, ಪ್ರಿಯೆ, ನನ್ನ [illegible] "ಅ ಪುತ್ರಸ್ಯ ಗತಿರ್ನಾಸ್ತಿ" ಎಂಬಂತೆ [illegible] ಎಂದು [illegible] [illegible] [illegible] [illegible] [illegible] ಅದಕ್ಕೆ ನಮಗೆ ಮಕ್ಕಳಾಗಲಿಲ್ಲ [illegible] [illegible] ಮಾಘವನ್ನು [illegible] [illegible] [illegible] [illegible] [illegible]

[illegible] ದೇವತೆಗಳೂ [illegible] [illegible] ಹರಿಯು ಭಕ್ತನ [illegible]

ಅಧ್ಯಾಯ ಹದಿನಾಲ್ಕು

ಮಾರ್ಕಂಡೇಯ ಉಪದೇಶ

ಶ್ರೀ ಮಹಾವಿಷ್ಣುವು ನಾರದನನ್ನು ಕುರಿತು ಹೀಗೆ ಹೇಳಿದನು. "ನಾರದಾ ಕೇಳಿದೆಯಾ ನೈಮಿಷಾರಣ್ಯದಲ್ಲಿ ಮುನಿಗಳೆಲ್ಲರೂ ತಾವು ತಾವು ಶ್ರೇಷ್ಠರೆಂದು ಒಬ್ಬರೊಬ್ಬರು ಜಗಳವಾಡುತ್ತಿದ್ದಾರಂತೆ." ನಾರದನು ಅದನ್ನು ಕೇಳಿ "ಯಾರ್ಯಾರು ಹೇಗೆ ಅಲ್ಲಿ ಜಗಳವಾಡುತ್ತಿರುವರು ಮತ್ತೆ ಏತಕ್ಕಾಗಿ? ಅವರುಗಳು ಜಿತೇಂದ್ರಿಯರು ಕೋಪರಹಿತರು. ಅವರುಗಳೇ ಜ್ಞಾನಿಗಳಲ್ಲವೆ? ಮುನಿಗಳು. ಅಂಥಹ ಮುನಿಗಳು ಜಗಳವಾಡುವುದು ಹೇಗೆ ಆಶ್ಚರ್ಯ" ಎಂದನು. ಆಗ ಮಹಾ ವಿಷ್ಣುವು ನಾರದನಿಗೆ ಹೇಳಿ, ವೃದ್ಧನಾದುದರಿಂದ ತಾನೇ ಅಧಿಕನೆಂದೂ, ಗೌತಮನು ತಾನು ಮಹರ್ಷಿಗಳಲ್ಲಿ ಹಿರಿಯನಾದುದರಿಂದ ತಾನೇ ಅಧಿಕನೆಂದೂ, ಬ್ರಹ್ಮಕಲ್ಪವನ್ನು ತಾನು ನೋಡಿ ದವನೆಂದೂ ಹೇಳಲು ಗಾರ್ಗ್ಯ ಮುನಿಯು ಮಹಿಮೆಯುಳ್ಳವ ಋಷಿಯಲ್ಲಿ ಎಲ್ಲರಿಗೂ ಶಾಸ್ತ್ರ ಪಾಠವನ್ನು ಮಾಡಿರುವುದರಿಂದ ತಾನು ಹಿರಿಯನೂ ಅಧಿಕ ನೆಂದೂ, ಮಾಂಡವ್ಯನು, ತಾನು ಸರ್ವ ಶಾಸ್ತ್ರ ಪಂಡಿತನಾದುದರಿಂದ ತಾನೇ ಶ್ರೇಷ್ಠನೆಂದೂ, ಶಂಕ ಮುನಿಯು ತಾನೆಂದು ಸರ್ವಾಂಗನಿಗ್ರಹನಾಗಿದ್ದನು. ಅತ್ರಿ ಮಹರ್ಷಿಯು ಮುನಿಕುಲದಲ್ಲಿಯೇ ತಾನು ಶ್ರೇಷ್ಠನೆನಲು, ವ್ಯಾಸನು ತಾನು ವೇದ ಶಾಸ್ತ್ರ ಪಾರಂಗತನಾಗಿ ಹಿರಿಯರಿಂದೆಲ್ಲಾರಿಂದ ಪೂಜಿಸಲ್ಪಡುವನೆಂದೂ ತಾನೇ ಅಧಿಕನೆನಲು, ಶೌನಕನು ಎಲ್ಲರಿಗಿಂತ ತಾನೇ ಶ್ರೇಷ್ಠನೆಂದೂ ಎಲ್ಲರೂ ಒಬ್ಬರನ್ನೊಬ್ಬರು ಹಿಡಿದು ಎಳೆದಾಡಿ ಗುದ್ದಾಡಿದರು. ಅವರಲ್ಲಿ ರಜೋಗುಣ ಪ್ರಧಾನವಾಗಿ, ವೈಷಮ್ಯದ ಬೀಜ ಬಿತ್ತಿದೆ. ದೇವಾ ಕಾರಣಕ್ಕಾಗಿ ಒಬ್ಬರನ್ನೊಬ್ಬರು ಮೂದಲಿಸ ತೊಡಗಿದ್ದಾರೆ.

ಅವರ ಪರೀಕ್ಷೆ ಕಳೆಯಲು ನಾನು ಸನಕನಿಂದ ಸನತ್ಕುಮಾರ ಸನತ್ಸುಜಾತರನ್ನೂ, ಕಲ್ಪಾಂತರಗಳನ್ನು ಕಂಡ ಮಾರ್ಕಂಡೇಯ ಮುನಿ ಯನ್ನು ಕಳುಹಿಸುತ್ತಿದ್ದೇನೆ. ಸನಕ ಸನತ್ಸುಜಾತರೂ ಮಾರ್ಕಂಡೇಯ

ನ್ನೈಯನ್ನು ಕುರಿತು, ಮಂಗಳಾಂಗೀ, ಇನ್ನು ಎಂಟು
ಸುಖವಾಗಿ ನೆಮ್ಮದಿಯಿಂದಿರು. ನಿನಗೆ ಯಾವ ಲೋಕದಲ್ಲಿ
ಬೇಕಾದುದನ್ನು ನಾನು ತಂದು ಕೊಡುತ್ತೇನೆ, ಎಂದು
ದನು. ಕನ್ಯೆ ತಾನು ಚಿಂತಿಸಿದಳು. ನಾರದನಿಗೆ ದಿಕ
"ಅಯ್ಯಾ ನಾನು ಸೋಮವಾರ ಶಿವಲಿಂಗಾರ್ಚನೆಯು
ದ್ದೇನೆ. ಅದಕ್ಕೆ ಅವಕಾಶ ಮಾಡಿಕೊಡು ಎಂದಳು.
ಟಕೇಶ್ವರ ದೇವಾಲಯವನ್ನು ತೋರಿಸಿ, ಅಲ್ಲಿಗೆ ಹೋಗಿ
ಎಂದು ಹೇಳಿದನು.

ೋಮವಾರ ಹಾಟಕೇಶ್ವರ ದೇವಾಲಯಕ್ಕೆ ಹೋಗಿ
ಸಲ ಅಲ್ಲಿಗೆ ತ್ರಿಲೋಕ ಸಂಚಾರಿಯಾದ ನಾರದರು
ಕನ್ಯೆಯು ನಾರದರಿಗೆ ವಂದಿಸಿ," ಮಹಾತ್ಮ ನಾನೀಗ
ಬಂಧಿಯಾಗಿದ್ದೇನೆ. ನನ್ನ ತಂದೆ ಅಲ್ಲಿ ನನಗಾಗಿ ಹು
ನಾದರೂ ಎಂಟು ತಿಂಗಳ ನಂತರ ನನ್ನನ್ನು ಮದುವೆ
ದ್ದಾನೆ. ಇವನಿಂದ ನನ್ನನ್ನು ಹೇಗಾದರೂ ಪಾರು
ಬೇಡಿಕೊಂಡಳು. ನಾರದನು ದಿವ್ಯದೃಷ್ಟಿಯಲ್ಲಿ
ನು. ಕನ್ಯೆಯನ್ನು ಕುರಿತು ಮಗು ನೀ ಭಯಪಡ
ಶಿವಭಕ್ತನಾದೊಬ್ಬ ರಾಜನು ಬಂದು ರಾಕ್ಷಸನನ್ನು
ತ್ತಾನೆ. ಅದುವರೆಗೂ ನೀನು ನಾಳೆ ಮಾಘಮಾಸ
ನಲ್ಲಿರುವ ಸರೋವರದಲ್ಲಿ ಸ್ನಾನಮಾಡಿ, ಶಿವನನ್ನು
ಇಷ್ಟಾರ್ಥವು ಈಡೇರುವುದು. ಮಾಘಸ್ನಾನ ಮಾಡಿ
ತಮಗೆ ಬೇಕಾದುದನ್ನು ಪಡೆಯಲು ಆರ್ತರಾ
ವರಿಗೆ ಕನ್ಯೆಯೂ, ಕಷ್ಟಹರವೂ, ಸುಖಪ್ರದವೂ
ಸಿದ್ಧಿಗಳು ಈ ಮಾಘವ್ರತದಿಂದ ಲಭಿಸುವುದು.
ದನು. ವಿದ್ಯಾಧರ ಕನ್ಯೆಯು ಹಾಗೆಯೇ ಮಾಘ
ನ್ನು ನಿತ್ಯವೂ ಭಕ್ತಿಯಿಂದ ಪೂಜಿಸುತ್ತಿದ್ದಳು.
ಕ್ಕೆ ಬಂದನು. ಅಲ್ಲಿಯ ರಾಜ ಹರಿದ್ರಥನೆಂಬ

ನನ್ನು ಈ ಸಂತಸನ್ನನು ಹರಿಭಕ್ತ, ವಿರತನು ಉತ್ತಮಶೀಲ, ಸತ್ಯನಿಷ್ಠ, ಧರ್ಮಿಷ್ಠ ಪಶುಪಕ್ಷಿ ಭೇದವಿಲ್ಲದೆ ಎಲ್ಲರನ್ನೂ ಹರಿಸಮಾನರೆಂದೇ ಭಾವಿಸಿ ಎಲ್ಲರಲ್ಲಿಯೂ ಹರಿ ಯನ್ನೇ ಕಾಣುತ್ತಾ ಕಾಲ ಕಳೆಯುತ್ತಿದ್ದನು. ನಾರದರು ಹರಿದ್ರಥನನ್ನು ಕಂಡು, "ರಾಜೇಂದ್ರ ಪಾತಾಳದಲ್ಲಿ ರಾಕ್ಷಸನಿಂದ ಅಪಹರಿಸಲ್ಪಟ್ಟ ವಿದ್ಯಾಧರ ಕನ್ಯೆಯಿರುವಳು. ಆಕೆ ಅತ್ಯಂತ ರೂಪವತಿ. ನಿನಗೆ ಯೋಗ್ಯಳಾದವಳು. ನೀನು ಹೇಗಾದರೂ ಅಲ್ಲಿಗೆ ಹೋಗಿ ರಾಕ್ಷಸನನ್ನು ಕೊಂದು ಆಕೆಯನ್ನು ವರಿ. ರಾಕ್ಷಸನಾದರೋ ಮಹಾಶೂರ. ಶಿವನಿಂದ ತ್ರಿಶೂಲವನ್ನೇ ಪಡೆದಿದ್ದಾನೆ. ನೀನು ಆ ತ್ರಿಶೂಲವನ್ನು ವಶಪಡಿಸಿಕೊಂಡು ಅದರಿಂದಲೇ ಅವನನ್ನು ವಧಿಸಬೇಕು ಎಂದು ಹೇಳಿದನು.

ಹರಿದ್ರಥನು ಪಾತಾಳ ಲೋಕಕ್ಕೆ ಹೋಗುವುದು ಹೇಗೆಂದು ಕೇಳಿದನು. ಅದಕ್ಕೆ ನಾರದರು "ರಾಜಾ ಸಮುದ್ರದ ಹತ್ತಿರ ಹೋಗು, ಸಮುದ್ರ ನಿನ್ನನ್ನು ನೋಡಿ ಇಬ್ಭಾಗವಾಗಿ ದಾರಿ ಬಿಡುತ್ತದೆ. ನೀನು ಆ ಪಾತಾಳವನ್ನು ತಲುಪ ಬಹುದು. ಅಲ್ಲಿ ತ್ರಿಶೂಲ ಪಡೆದ ರಾಕ್ಷಸನ ಸಂಹಾರ ಮಾಡಿ ಕನ್ಯೆಯನ್ನು ಕರೆದುತಾ" ಎಂದನು.

ಹರಿದ್ರಥನು ನಾರದನ ಮಾತಿಗೆ ಒಪ್ಪಿ ವಂದಿಸಲು ನಾರದನು ಅಂತ ರ್ಧಾನನಾದನು.

ಹರಿದ್ರಥ ನೇರವಾಗಿ ಸಮುದ್ರದ ಹತ್ತಿರ ಬಂದು ನಿಂತಾಗ ಸಮುದ್ರ ಬಿರಿದು ದಾರಿಬಿಟ್ಟಿತು. ಆ ಸಮಯದಲ್ಲಿ ರಾಕ್ಷಸನು ಬ್ರಹ್ಮಲೋಕಕ್ಕೆ ಬ್ರಹ್ಮ ನಿಸ್ಪರ್ಧೆಗಾಗಿ ಹೋಗಿದ್ದನು. ಹರಿದ್ರಥನು ಪಾತಾಳ ಸೇರಿ ರಾಕ್ಷಸನ ಪಟ್ಟಣ ವನ್ನು ವಶಪಡಿಸಿಕೊಂಡು ಅಲ್ಲಿಯೇ ಇದ್ದ ತ್ರಿಶೂಲವನ್ನು ಹಿಡಿದು ಅರಮನೆ ಯಿಂದ ಹೊರಬಂದನು, ರಾಕ್ಷಸನೂ ಬ್ರಹ್ಮನಿಂದ ಹಿಂದಿರುಗಿದನು. ಎದುರಿಗೆ ಹರಿದ್ರಥ ತ್ರಿಶೂಲ ಹಿಡಿದು ಬರುವುದನ್ನು ಕಂಡು ತನ್ನ ಅಂತ್ಯ ಸಮೀಪಿಸಿ ತೆಂದು ತಿಳಿದು ಹರಿದ್ರಥನೊಡನೆ ಹೋರಾಡಿದನು. ಹರಿದ್ರಥ ತ್ರಿಶೂಲದಿಂದ ರಾಕ್ಷಸನನ್ನು ಸಂಹರಿಸಿದ. ವಿದ್ಯಾಧರ ಕನ್ಯೆಯು ಬಳಿಗೆ ಬಂದ. ಸುಂದರಾಂಗಿ ಯನ್ನು ಕಂಡು ಸಂತೋಷಗೊಂಡ. ಆಕೆ ಲಜ್ಜೆಯಿಂದ ತಲೆ ತಗ್ಗಿಸಿದಳು.

ತಾಯಿ ವಿಧವೆ, ಇನ್ನೂ ವಯಸ್ಸಿನವಳೇ ಆಗಿದ್ದು, ಆಕೆಯೂ ಪರಪುರುಷರ ಜೊತೆ ಕಾಮಕೇಳಿಗಳಲ್ಲಿ ತಲ್ಲೀನಳಾಗಿದ್ದಳು. ಒಂದು ದಿನ ಶೂದ್ರನ ತಾಯಿ ಅಷ್ಟಮೀ ರಾತ್ರಿಯಲ್ಲಿ ವಿಟನನ್ನು ಹುಡುಕಿಕೊಂಡು ಹೊರಟಳು. ವಿಟನಿಗಾಗಿ ಕಾಯುತ್ತಾ ಇದ್ದಳು. ಆ ವಿಟನು ಶೂದ್ರನ ಸ್ನೇಹಿತನೇ ಆಗಿದ್ದನು. ಶೂದ್ರನೂ ತನ್ನ ಸ್ನೇಹಿತನನ್ನು ಹುಡುಕಿಕೊಂಡು ಅಲ್ಲಿಗೇ ಹೊರಟನು. ಎಷ್ಟು ಹೊತ್ತಾದರೂ ವಿಟನು ಬಾರದಿರಲು ಶೂದ್ರನ ತಾಯಿ ಮಲಗಿಬಿಟ್ಟಳು. ಶೂದ್ರನೂ ಅಲ್ಲಿಯೇ ಮಲಗಿದ. ಒಂದು ಹೊತ್ತಿನಲ್ಲಿ ಎದ್ದು ಮೆಲ್ಲಗೆ ಒಳಕ್ಕೆ ಹೋದ. ಕತ್ತಲಲ್ಲಿ ಮಲಗಿದ್ದ ಅವನ ತಾಯಿಯೆಂದು ತಿಳಿಯದೆ ಅಪ್ಪಿಕೊಂಡ. ಅವಳಿಗೂ ಮಗನೆಂದು ತಿಳಿಯದೆ, ವಿಟನೇ ಎಂದು ಅಪ್ಪಿಕೊಂಡಳು. ಇಬ್ಬರೂ ಒಬ್ಬರನ್ನೊಬ್ಬರು ಅಪ್ಪಿ ಮುದ್ದಾಡಿ, ಸಂಭೋಗಿಸಿದರು. ಬೆಳಕಾದಾಗ ಒಬ್ಬರನ್ನೊಬ್ಬರು ಮುಖ ನೋಡಿಕೊಂಡು ಪೆಚ್ಚಾಗಿ, ಪಶ್ಚಾತ್ತಾಪ ಪಟ್ಟರು.

ಯಾರೇ ಆಗಲಿ, ತಾಯಿ ಮಗನೋ, ಅಕ್ಕ ತಮ್ಮಂದಿರೋ, ಅಣ್ಣ ತಂಗಿಯರೋ, ತಂದೆ ಮಗಳೋ, ಒಂಟಿಯಾಗಿದ್ದಲ್ಲಿ ಹೆಂಗಸಿಗೆ ಗಂಡಸರ ದರ್ಶನದಿಂದ ಕಾಮೋದ್ರೇಕವಾಗುತ್ತದೆ. ಗಂಡಸಿಗೂ ಏಕಾಂತದಲ್ಲಿ ಸಂಭೋಗಿಸಲು ಮನಸ್ಸಾಗುತ್ತದೆ. ಆದ್ದರಿಂದ ಏಕಾಂತದಲ್ಲಿ ಸ್ತ್ರೀ ಪುರುಷರಾದ ಅನ್ಯರು ಇರಬಾರದು. ಸತಿಪತಿಗಳಲ್ಲದ, ಸ್ತ್ರೀ ಪುರುಷರು ಏಕಾಂತದಲ್ಲಿ ನಡೆಸುವ ಕಾರ್ಯ ಜಗತ್ತು ನೋಡದೇ ಇದ್ದರೂ, ಸದಾ ಅವರನ್ನು ನೋಡುತ್ತಿರುವ ಹದಿನಾಲ್ಕು ಜನ ಸಾಕ್ಷಿಗಳು ಇದ್ದೇ ಇರುತ್ತಾರೆ. ಯಾರೆಂದರೆ ಸೂರ್ಯ, ಚಂದ್ರ, ವಾಯು, ಅಗ್ನಿ, ಆಕಾಶ, ಭೂಮಿ, ನೀರು, ಮನಸ್ಸು, ಯಮ, ರಾತ್ರಿ, ಹಗಲು, ಪ್ರಾತಃಸಂಧ್ಯೆಗಳು, ಧರ್ಮ ಇವೇ ಸಾಕ್ಷಿಭೂತಗಳು.

ತಾನು ಮಹಾ ಪಾಪ ಮಾಡಿದೆನೆಂದು ಚಿಂತಿಸಿ, ಶೂದ್ರನ ತಾಯಿ ಗಂಗೆಯಲ್ಲಿ ಬಿದ್ದು ಸತ್ತಳು.

ಶೂದ್ರನು ಮಾತ್ರ ಭಯವಿಲ್ಲದೆ ಪರಸ್ತ್ರೀ ಸಂಗದಲ್ಲೇ ಕಾಲ ಕಳೆಯುತ್ತಾ

ಇನ್ನೂ ವಯಸ್ಸಿನವಳೇ ಆಗಿದ್ದು, ಆಕೆಯೂ
ಗಳಲ್ಲಿ ತಲ್ಲೀನಳಾಗಿದ್ದಳು. ಒಂದು ದಿನ ಶೂದ್ರನ
ರುಲ್ಲಿ ವಿಟನನ್ನು ಹುಡುಕಿಕೊಂಡು ಹೊರಟಳು.
ಇದ್ದಳು. ಆ ವಿಟನು ಶೂದ್ರನ ಸ್ನೇಹಿತನೇ
ಸ್ನೇಹಿತನನ್ನು ಹುಡುಕಿಕೊಂಡು ಅಲ್ಲಿಗೇ
ರೂ ವಿಟನು ಬಾರದಿರಲು ಶೂದ್ರನ ತಾಯಿ ಮಲಗಿ
ೇ ಮಲಗಿದ. ಒಂದು ಹೊತ್ತಿನಲ್ಲಿ ಎದ್ದು
ಲ್ಲಿ ಮಲಗಿದ್ದ ಅವನ ತಾಯಿಯೆಂದು ತಿಳಿಯದೆ
ಮಗನೆಂದು ತಿಳಿಯದೆ, ವಿಟನೇ ಎಂದು ಅಪ್ಪಿಕೊಂಡು
ಬ್ಬರು ಅಪ್ಪಿ ಮುದ್ದಾಡಿ, ಸಂಭೋಗಿಸಿದರು.
ರು ಮುಖ ನೋಡಿಕೊಂಡು ಪೆಚ್ಚಾಗಿ,

ತಾಯಿ ಮಗನೋ, ಅಕ್ಕ ತಮ್ಮಂದಿರೋ,
ದೆ ಮಗಳೋ, ಒಂಟಿಯಾಗಿದ್ದಲ್ಲಿ ಹೆಂಗಸಿಗೆ
ೇದ್ರೇಕವಾಗುತ್ತದೆ. ಗಂಡಸಿಗೂ ಏಕಾಂತದಲ್ಲಿ
ತ್ತದೆ. ಆದ್ದರಿಂದ ಏಕಾಂತದಲ್ಲಿ ಸ್ತ್ರೀ ಪುರುಷ
ಸತಿಪತಿಗಳಲ್ಲದ, ಸ್ತ್ರೀ ಪುರುಷರು ಏಕಾಂತದಲ್ಲಿ
ೋಡದೇ ಇದ್ದರೂ, ಸದಾ ಅವರನ್ನು ನೋಡುತ್ತ
ಕ್ಷಿಗಳು ಇದ್ದೇ ಇರುತ್ತಾರೆ. ಯಾಕೆಂದರೆ
ಗ್ನಿ, ಆಕಾಶ, ಭೂಮಿ, ನೀರು, ಮನಸ್ಸು,
ತಃಸಂಧ್ಯೆಗಳು, ಧರ್ಮ ಇವೇ ಸಾಕ್ಷಿಭೂತಗಳು.

ಪಾಪ ಮಾಡಿದೆನೆಂದು ಚಿಂತಿಸಿ, ಶೂದ್ರನ ತಾಯಿ

ಭಯವಿಲ್ಲದೆ ಪರಸ್ತ್ರೀ ಸಂಗದಲ್ಲೇ ಕಾಲ ಕಳೆ

ಧನವೆಲ್ಲಾ ವ್ಯಯಮಾಡಿ, ಕಿರಾತನ ಬಳಿ ಸೇವಕನಾಗಿ ಬಂದು ಸೇರಿದ. ಅವನ ಸೇವಕನಾಗಿ ಅವನಿಗೆ ಪ್ರಿಯನಾಗಿದ್ದನು. ಅದೇ ಪ್ರದೇಶದವನಾದ ವಿಶ್ರಂಖಲನೆಂಬ ಬ್ರಾಹ್ಮಣನು ತನ್ನ ವೃತ್ತಿ ಧರ್ಮವಾದ ಜಪ, ತಪ, ಸಂಧ್ಯಾವಂದನೆಯನ್ನು ಬಿಟ್ಟು, ಉದರ ಪೋಷಣೆಗಾಗಿ ಕಿರಾತನನ್ನು ಬಂದು ಆಶ್ರಯಿಸಿದನು. ಆ ಬ್ರಾಹ್ಮಣ ತನ್ನ ಹೆಂಡತಿಯನ್ನು ಬಿಟ್ಟು ಕಿರಾತನ ಬಳಿಯಲ್ಲಿ ಅವರಿಗೆ ಪುರೋಹಿತನಾಗಿ. ಧನಾರ್ಜನೆ ಮಾಡುತ್ತಾ ಇದ್ದನು.

ಹೀಗಾಗಿ ಬ್ರಾಹ್ಮಣ, ಹಂತಕ ಕಿರಾತ, ಸುವರ್ಣ ಚೋರ ಅಕ್ಕಸಾಲಿಗ, ತಾಯಿ ಜೊತೆ ಸಂಭೋಗಿಸಿದ ನೀಚ ಶೂದ್ರ, ಸ್ವಧರ್ಮ ಮತ್ತು ಪತ್ನಿಯನ್ನು ತೊರೆದ ವಿಶ್ರಂಖಲನೆಂಬ ಬ್ರಾಹ್ಮಣ– ಈ ನಾಲ್ವರು ಪಾಪಿಗಳೂ ಒಂದು ಕಡೆ ಸೇರಿದಂತಾಯಿತು.

ಮಹಾಪಾಪಿಗಳೊಂದಿಗೆ ವಿಶ್ರಂಖಲನ ಸಂಬಂಧವೇರ್ಪಟ್ಟಿದ್ದರಿಂದ ಬ್ರಾಹ್ಮಣತ್ವವು ನಶಿಸಿತು. ಒಂದು ದಿನ ಪಾತಕಿಗಳೊಂದಿಗೆ ಕೂಡಿದರೂ, ಬ್ರಾಹ್ಮಣನು ಅರ್ಜಿಸಿದ ಪುಣ್ಯದಲ್ಲಿ ನಾಲ್ಕನೇ ಒಂದು ಭಾಗ ನಶಿಸುವುದು. ಎರಡು ಧಿನ ಪಾತಕಿಗಳೊಂದಿಗೆ ಶಯನಿಸಿ ಭೋಜನ ಮಾಡಿದರೆ ಅರ್ಧ ಪುಣ್ಯ ನಶಿಸುವುದು. ನಾಲ್ಕು ದಿನಗಳೂ ಪಾಪಿಗಳೊಂದಿಗೆ ಇದ್ದರೆ, ಪುಣ್ಯವೆಲ್ಲಾ ನಶಿಸಿ ಪೂರಾ ಪಾತಕಿಯೇ ಆಗುವನು. ವಿಶ್ರಂಖಲನು ಪಾಪಿಗಳ ಜೊತೆಯೇ ಇದ್ದು ತನ್ನ ಎಲ್ಲಾ ಪುಣ್ಯ ನಾಶಮಾಡಿಕೊಂಡು ಮಹಾ ಪಾತಕಿಯೇ ಆದನು. ತಿಳಿದೂ ತಿಳಿದು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವೇ ಇಲ್ಲವೆಂದು ಮನು ಧರ್ಮಶಾಸ್ತ್ರದಲ್ಲಿ ಹೇಳಿದೆ. ತಿಳಿಯದೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವುಂಟು. ತಿಳಿದು ಮಾಡಿದ ಪಾಪಕ್ಕೆ ನಾಲ್ಕು ಮನ್ವಂತರದವರೆಗೂ ನರಕ ವಾಸವಾಗಿ ಆಮೇಲೆ ಪ್ರಾಯಶ್ಚಿತ್ತವುಂಟೆಂದು ಹೇಳುತ್ತಾರೆ.

ಅಜ್ಞಾನದಿಂದ ಮಾಡಿದ ಮಹತ್ತರ ಪಾಪವಾದರೂ ಪ್ರಾಯಶ್ಚಿತ್ತದಿಂದ ಪರಿಹಾರವಾಗುವುದು. ಪಶ್ಚಾತ್ತಾಪವೇ ಪ್ರಾಯಶ್ಚಿತ್ತವೆಂದು ಹೇಳುತ್ತಾರೆ. ಅಂದರೆ ತಾನು ಮಾಡಿದುದು ತಪ್ಪೆಂದು ತಿಳಿದು, ಅದಕ್ಕಾಗಿ ವ್ಯಥೆ

ಸೂರ್ಯ ದರ್ಶನದಿಂದ ಪರಿಹಾರವಾಗುವುದು. ಹಾಗೆ ಮಾಡಿದ ದೋಷವು ಸೂರ್ಯ ದರ್ಶನದಿಂದ ಪರಿಹಾರವಾಗುವುದು. ಮಾಘಸ್ನಾನ ಮಾಡುವುದರಿಂದ ಆಕಾಶ ಗಂಗೆಯಲ್ಲಿ ಸ್ನಾನ ಮಾಡಿದ ಫಲವು ದೊರೆಯುವುದು.

ಶೌನಕಾದಿಗಳೇ ಕೇಳಿ, ಈಶ್ವರನು ಪಾರ್ವತಿಗೆ ಹೇಳಿದ ವಿಷಯವನ್ನು ಮತ್ತು ಮಾಘದ ಶ್ರೀ ವಿಷ್ಣುವು ಲಕ್ಷ್ಮೀದೇವಿಗೆ ವಿವರಿಸಿದ ರೀತಿಯನ್ನು ಮಹಿಮಾ ವಿಶೇಷಗಳನ್ನು ರಸವತ್ತಾಗಿ ತಿಳಿಸುತ್ತಿರುವೆನು.

ಗುರು ಹಿರಿಯರನ್ನು ಮಾತಾ ಪಿತೃಗಳನ್ನು ಆದರಿಸದವನು, ಪರರ ಧನ ವನ್ನು ಅಪಹರಿಸಿದವನು, ಪರಸ್ತ್ರೀಯನ್ನು ಮೋಹಿಸಿದವನು, ಸದಾಚಾರ ವಿಚಾರಗಳನ್ನು ಹೀಯ್ಯಾಳಿಸುವವನು, ಪರನಿಂದೆ ಮಾಡುವವನು, ಪರಾನ್ನ ವನ್ನು ತಿನ್ನುವವನು, ಗುರು ಪತ್ನಿಯ ಸಂಗವನ್ನು ಮಾಡಿದವನು, ಕುಲ ಭ್ರಷ್ಟನಾದವನು ಮೋಸಗೊಳಿಸುವವನು, ಮಿತ್ರರಿಗೆ ದ್ರೋಹ ಮಾಡುವವನು ಆತ್ಮಸ್ತೋತ್ರ ಮಾಡಿಕೊಳ್ಳುವವನು, ಅಗ್ನಿ ಹೋತ್ರಗಳನ್ನು ಬಿಟ್ಟವನು, ದಂಪತಿಗಳಲ್ಲಿ ಭೇದವನ್ನುಂಟು ಮಾಡುವವನು, ವಿವಾಹಾದಿ ಕಾರ್ಯಗಳಿಗೆ ಅಡ್ಡಿ ಪಡಿಸುವವನು, ವೇದಗಳಿಂದ ಹಣ ಗಳಿಸುವವನು, ರಹಸ್ಯವಾಗಿ ಪಾಪ ಕಾರ್ಯ ಗಳಲ್ಲಿ ಮುಳುಗಿರುವವನು ಇವರೆಲ್ಲರ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಮಾಘ ಸ್ನಾನವೊಂದು ವರವಾಗಿದೆ. ಎಂಥಹುದೇ ಪಾಪ ಕಾರ್ಯಗಳನ್ನು ಮಾಡಿರಲಿ ಮಾಘಮಾಸದಲ್ಲಿ ಒಂದು ದಿನವಾದರೂ ಸೂರ್ಯೋದಯಕ್ಕೆ ಮುಂಚೆ ಸ್ನಾನ ಮಾಡಿದಲ್ಲಿ ಅವನ ಪಾಪಗಳೆಲ್ಲಾ ಒಮ್ಮೆಲೇ ನಿರ್ನಾಮವಾಗುವುವು. ಭಯ ದಿಂದಲಾಗಲೀ, ಭಕ್ತಿಯಿಂದಲಾಗಲೀ ಉದಾಸೀನದಿಂದಲಾಗಲೀ ಮಾಘಸ್ನಾನ ವನ್ನು ಬಲವಂತಪಡಿಸಿಯಾಗಲಿ ಮಾಡಿದರೂ ಫಲವುಂಟು.

ಯಾರು ಮಾಘ ಸ್ನಾನ ಮಾಡಲು ಅಡ್ಡಿಪಡಿಸುತ್ತಾರೋ ಅಂಥಹವರು ಕೌರವಾದಿ ನರಕಯಾತನೆ ಅನುಭವಿಸುವರು. ಯಾರು ಮಾಘ ಸ್ನಾನವನ್ನು ಪ್ರೋತ್ಸಾಹಿಸುತ್ತಾರೋ ಮಾಡಲಾಗದವರಿಗೆ ಸಹಾಯ ಮಾಡಿ ಮಾಘಸ್ನಾನ ಮಾಡಿಸುತ್ತಾರೋ ಅಂಥವರು ಈ ಜನ್ಮದಲ್ಲಿ ಸುಖ ಸೌಖ್ಯ ಸಂಪತ್ತು ಗಳಿಂದ ಕೂಡಿ ಕಡೆಗೆ ಕೈಲಾಸ ಪದವಿಯನ್ನು ಪಡೆಯುತ್ತಾರೆ.

...ಡಲು ಹೊರಟನು ಎಂಬಲ್ಲಿಗೆ ಹದಿನೆಂಟನೆಯ ಅಧ್ಯಾಯವು

...ವಿವೇಕಿಗಳೂ ಸಹ ದೇಹಾಭಿಮಾನದಿಂದ ಸಲ್ಲದ ಚಿಂತೆಗೆ ಗುರಿಯಾಗುತ್ತಾರೆ.

ಅಧ್ಯಾಯ ಹತ್ತೊಂಬತ್ತು

ಮೃತ್ಯುಂಜಯ

...ರ್ಯನು ಮತ್ತೆ ತಪಸ್ಸಿಗೆ ಕುಳಿತುದುದನ್ನು ಕಂಡು ಮತ್ತೆ
...ನು. ಭಕ್ತನನ್ನು ಕುರಿತು "ಅಯ್ಯಾ ಪುನಃ ಏಕೆ ನೀನು
...ದೆ" ಎನಲು ವಿಪ್ರವರ್ಯನು, ದೇವಾ, ನಿನ್ನ ಕೃಪೆಯಿಂದ
...ನವಾಯಿತು. ಸಂತೋಷಗೊಂಡೆ. ಆದರೆ ನಾರದ ಮುನಿಗಳು
...ಮಗನಿಗೆ ಹನ್ನೆರಡು ವರ್ಷ ಆಯುಸ್ಸೆಂದು ಹೇಳಿದರು.
...ಮಗನಿಗಾಗಿ, ಹಗಲಿರುಳು ಅಳುತಿದ್ದಾಳೆ. ನೀನೀಗ ಕೃಪೆ
...ಮಗನ ಆಯುಸ್ಸನ್ನು ಹೆಚ್ಚಿಸಬೇಕು ಎಂದು ಪ್ರಾರ್ಥಿಸಿದನು.

...ವಿಷ್ಣುವು, ವಿಪ್ರನನ್ನು ಕುರಿತು "ಭಕ್ತ ನಿನ್ನ ಭಕ್ತಿಗೆ ಮೆಚ್ಚಿ
...ತ್ತೆ. ಆದರೆ ಅವನಿಗೆ ಹನ್ನೆರಡು ವರ್ಷಕ್ಕೆ ಗಂಡಾತರವಿದೆ.
...ಪತ್ನಿಯೇ ಕಾರಣ. ಅದು ಹೇಗೆಂದರೆ ಪೂರ್ವದಲ್ಲಿ ನಿನ್ನ
...ಸದ್ಬ್ರಾಹ್ಮಣನ ಮಗಳು. ಜ್ಞಾನಶರ್ಮನೆಂಬ ಬ್ರಾಹ್ಮಣನ
...ು. ರೂಪವಂತೆ, ಗುಣವಂತೆಯೂ, ಪತಿವ್ರತೆಯೂ ಆಗಿದ್ದಳು.
...ಮಾಘಮಾಸದಲ್ಲಿ ಮಾಘವ್ರತ ಆಚರಿಸುತ್ತಿದ್ದರು. ಆಕೆ
...ನಿಷ್ಟೆಯಿಂದ ಮಾಡಿದಳು. ಮಾಘ ಪೌರ್ಣಮಿಯಂದು
...ಕೊಡಬೇಕೆಂದು ಆಕೆಯ ಪತಿ ಹೇಳಲು, ಆಕೆ ಅದಕೊಪ್ಪ
...ಕಳೆಯಿತು. ಈಗ ನೀವಿಬ್ಬರೂ ಪತಿಪತ್ನಿಯರಾಗಿದ್ದಿರಿ.
...ದ ಪಾಪಕ್ಕಾಗಿ ಮಕ್ಕಳಿಲ್ಲದಾಯ್ತು. ಗಂಡನ ಮಾತನ್ನು
...ಪುತ್ರನ ಆಯುಸ್ಸು ಕಡಿಮೆಯಾಯ್ತು. ಅದನ್ನೇ ನಾರದನು

ಪುಣ್ಯವಿದ್ದರೇನೇ, ಮಾಘಮಾಸ ವ್ರತವಾಚರಿಸುವ ಅಭಿಲಾಷೆ ಹುಟ್ಟುತ್ತದೆ. ಹಿಂದೆ ನೀವು ಮಾಘಸ್ನಾನ ಮಾಡಿದ ಫಲದಿಂದ, ಯೋಗ್ಯರಾಗಿ ಜನಿಸಿ ಜ್ಞಾನವಂತರಾಗಿದ್ದಿರಿ. ಯಾರು ಮಾಘಸ್ನಾನ ನಿರಾಕರಿಸುವನೋ ಅವನು ಅನೇಕ ಕಷ್ಟಗಳನ್ನು ಅನುಭವಿಸುತ್ತಾನೆ. ಮಾಘಮಾಸಕ್ಕೆ ಪರಮೇಶ್ವರ ಅಧಿದೇವತೆ. ಮಾಘ ಪೌರ್ಣಮಿ ಮಾಧವನಿಗೆ ಪ್ರೀತಿ. ಮಾಘಮಾಸವು ವರ್ಷದಲ್ಲೆಲ್ಲಾ ಶ್ರೇಷ್ಟವಾದ ಮಾಸ.

ಆದುದರಿಂದ ನೀನು ಈ ಮಾಘಮಾಸದಲ್ಲಿ, ನಿನ್ನ ಮಗನಿಗೆ ಮಾಘಸ್ನಾನ ಮಾಡಿಸು. ಆಯುಷವೃದ್ಧಿಯಾಗುತ್ತದೆ. ಅನುಕೂಲವಾಗುತ್ತದೆ.

ಯಾರು ಭಕ್ತಿಯಿಂದ ಮಾಘಸ್ನಾನ ಮಾಡಿ ಹರನನ್ನು ಪೂಜಿಸುತ್ತಾರೋ, ಅಂತಹವರ ಆಯುರಾರೋಗ್ಯಗಳು ವೃದ್ಧಿಯಾಗುತ್ತದೆ. ಪರಮೇಶ್ವರನು ಲಯಕಾರಕನು. ಅವನು ಪ್ರೀತನಾದರೆ ಪ್ರಾಣವುಳಿವುದು. ಅದಕ್ಕಾಗಿಯೇ ಅವನನ್ನು ಮೃತ್ಯುಂಜಯನೆನ್ನುತ್ತಾರೆ. ನೀನು, ನಿನ್ನ ಮಗ, ಹೆಂಡತಿ ಮಾಘಸ್ನಾನ ಮಾಡಿ, ಹರನನ್ನು ಪ್ರಾರ್ಥಿಸಿ. ಎಂದು ಅಂತರ್ಧಾನನಾದನು.

ವಿಪ್ರವರ್ಯನು, ಹೆಂಡತಿ ಮಗನ ಸಮೇತ ಭಕ್ತಿಯಿಂದ ಮಾಘಸ್ನಾನಮಾಡಿ, ಮಹೇಶ್ವರನನ್ನು ಪೂಜಿಸಿ ಧ್ಯಾನಿಸಿದರು. ಮಗನು ಗಂಡಾಂತರದಿಂದ ಪಾರಾದನು. ಅನಂತರ ವಿಪ್ರನು ಧ್ಯಾನಗೈಯುತ್ತಾ ಪರಮೇಶ್ವರನನ್ನು ಸೇರಿದನು.

ಯಾರೇ ಆಗಲಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೇ ಆದರೂ ತಪ್ಪದೆ ಮಾಘವ್ರತವಾಚರಿಸಿ, ಸೌಖ್ಯ ಪಡೆಯಿರಿ ಎಂದು ಹೇಳಿದನೆಂಬಲ್ಲಿಗೆ ಹತ್ತೊಂಬತ್ತನೆಯ ಅಧ್ಯಾಯ ಮುಗಿದುದು.

ನೀತಿ : ಕರ್ಮಕ್ಕೆ ತಕ್ಕ ಫಲ.

ಸುವ್ರತನು ಅಂತೆಯೇ ಗುರುಗಳ ಅಪ್ಪಣೆ ಪಡೆದು ಗಂಗಾ ತೀರಕ್ಕೆ ಪ್ರಯಾಣ ಬೆಳೆಸಿದನು. ದಾರಿ ಮಧ್ಯೆಯಲ್ಲಿ ಋಷಿವರ್ಯರೋರ್ವರು ಮಾಘ ವ್ರತವನ್ನಾಚರಿಸುತ್ತಿದ್ದರು. ಸುವ್ರತನು ಋಷಿಗಳನ್ನು ಕುರಿತು "ಋಷಿವರ್ಯರೆ ನೀವು ಆಚರಿಸುತ್ತಿರುವ ವ್ರತವಾವುದು ? ಇದರಿಂದಾಗುವ ಫಲವೇನು ? ಎಂದು ಪ್ರಶ್ನಿಸಿದನು.

ಆಗ ಋಷಿಗಳು ತಮ್ಮ ಶಿಷ್ಯನಾದ ಸತ್ಯವ್ರತನೆಂಬುವನಿಗೆ ಮಾಘ ಮಾಸದ ವ್ರತ ಮಹಿಮೆಯನ್ನು ತಿಳಿಸೆಂದು ಹೇಳಿದರು. ಸತ್ಯವ್ರತನು ಸುವ್ರತನನ್ನು ಕುರಿತು," ಬ್ರಾಹ್ಮಣಕುಮಾರ ಸೂರ್ಯನು ಮಕರ ರಾಶಿಯಲ್ಲಿರುವ ಮಾಘ ಮಾಸದಲ್ಲಿ ಯಾವನಾದರೂ ಸೂರ್ಯೋದಯಕ್ಕೆ ಮುಂಚಿತವೇ ಎದ್ದು, ನದಿಯಲ್ಲಿ ಸ್ನಾನವನ್ನು ಮಾಡುವನೋ ಅಂಥವನ ಪಾಪಗಳೆಲ್ಲವೂ ಶೀಘ್ರದಲ್ಲಿ ಪರಿಹಾರವಾಗುವುವು. ಕ್ರಿಯಾಲೋಪ ಮಾಡದೆ ಮಾಘಮಾಸ ಪೂರ್ತಿ ಸ್ನಾನ ಪೂಜೆಗಳನ್ನು ಮಾಡುವವನು ಪರಮೇಶ್ವರನ ಸನ್ನಿಧಿಯನ್ನು ಸೇರುವನು.

ಮಾಘ ಸ್ನಾನ ಮಾಡದೇ ಇರುವವನು, ವ್ರತ ಮಾಡುವವರನ್ನು ನಿಂದಿಸುವವನು, ಸುಳ್ಳು ಸಾಕ್ಷ್ಯಗಳನ್ನು ಹೇಳುವವನು, ಪರರ ದ್ರವ್ಯವನ್ನು ಅಪಹರಿಸುವವನು, ತಂದೆ ತಾಯಿಗಳನ್ನು ದೂಷಿಸುವವನು, ಪರಸ್ತ್ರೀ ಸಂಗ ಮಾಡಿದವನು, ಕನ್ಯೆಯರನ್ನು ಮಾರುವವನು, ಮಾಘ ವ್ರತವನ್ನು ತ್ಯಜಿಸಿದವನು ಇಂಥವರನ್ನು ಬ್ರಹ್ಮಹತ್ಯ ದೋಷದವರೆಂದು ಹೇಳುತ್ತಾರೆ.

ದೇವರ ದ್ರವ್ಯ ಅಪಹರಿಸುವವನು, ಕೆರೆಯ ಕಟ್ಟೆಯನ್ನು ಒಡೆದು ನೀರು ಬಿಡುವವನು, ಬ್ರಾಹ್ಮಣರಿಗೆ ಮಾತುಕೊಟ್ಟು ತಪ್ಪು ಮಾಡುವವನು, ಆತ್ಮಸ್ತುತಿ ಮಾಡಿಕೊಳ್ಳುವವನು, ದೇವರಿಗೆ ನೈವೇದ್ಯವನ್ನು ಮಾಡದೆ ತಿನ್ನುವವನು, ಪರಸ್ತ್ರೀ, ಸೋದರ ಭಾರ್ಯಾ ಸಂಗ ಮಾಡುವವನು, ಗುರುಪತ್ನಿರತನೂ ವೇದಪಠನವಿಲ್ಲದೆಡೆ ವಾಸಿಸುವವನು, ಚಂಡಾಲ ಸ್ನೇಹ ಮಾಡುವವನು ಇವರನ್ನು ಪಂಚಮಹಾ ಪಾತಕರೆಂದು ಕರೆಯುತ್ತಾರೆ.

ಯಾರು ಭಕ್ತಿಯಿಂದ ಮಾಘಮಾಸದಲ್ಲಿ ಈ ಮಾಘ ಮಹಿಮೆಯನ್ನು ಶ್ರದ್ಧೆಯಿಂದ ಕೇಳುತ್ತಾರೋ ಅವರಿಗೆ ಲಭಿಸುವ ಫಲವು ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಸ್ನಾನ ಮಾಡಲು ಶಕ್ತಿಯಿಲ್ಲದಿದ್ದರೂ ಮಾಘ ಮಹಿಮೆಯನ್ನು ಶ್ರದ್ಧೆಯಿಂದ ಕೇಳಿದರೂ ಸಹಾ ಪುಣ್ಯಪ್ರಾಪ್ತಿಯುಂಟೆಂದು ಮಹಾವಿಷ್ಣುವು ಲಕ್ಷ್ಮಿಗೆ ತಿಳಿಸಿದನೆಂಬಲ್ಲಿಗೆ. ಮೊದಲನೆಯ ಅಧ್ಯಾಯವು ಮುಗಿದುದು.

ನೀತಿ : ಶ್ರದ್ಧೆ ಹಾಗೂ ವಿಶ್ವಾಸದಿಂದ ಮಾಡಿದ ಕಾರ್ಯಕ್ಕೆ ಸಿದ್ಧ ಶುಭಫಲವು ದೊರೆಯುತ್ತದೆ.

ಅಧ್ಯಾಯ ಎರಡು

ವ್ಯಭಿಚಾರಿಣಿಗೂ ವ್ರತದಿಂದ ಸಿದ್ಧಿ

ಮಾಘಸ್ನಾನದ ಫಲದಿಂದ ಮರಣಿಸಿದ ಪತಿಯನ್ನು ಪುನಃ ಪಡೆದ ಸತೀ ಮಣಿಯ ಕಥೆಯೊಂದಿದೆ. ಅದನ್ನು ತಿಳಿಸುತ್ತಿದ್ದೇನೆ ಕೇಳು. ಎಂದು ಮಹಾವಿಷ್ಣುವು ಲಕ್ಷ್ಮೀದೇವಿಗೆ ತಿಳಿಸಿದನು.

ಹಿಂದೆ ಸೌರಾಷ್ಟ್ರದೇಶದಲ್ಲಿ ಸುದೇವನೆಂಬ ಸದ್ಬ್ರಾಹ್ಮಣನಿದ್ದನು. ಆತನು ವೇದ ವೇದಾಂಗ ಪಾರಂಗತನಾಗಿದ್ದನು. ಅನೇಕ ಶಿಷ್ಯರಿಗೆ ವೇದ ಪಠಣ ಮಾಡಿಸುತ್ತಾ ಕಾಲ ಕಳೆಯುತ್ತಿದ್ದನು. ಆತನಿಗೆ ಹದಿನಾಲ್ಕು ವರ್ಷದ ಸುಂದರಿಯಾದ ಮಗಳಿದ್ದಳು. ವಿಶಾಲ ನೇತ್ರಗಳು, ಉದ್ದವಾದ ಕೂದಲು, ತೊಂಡೆ ಹಣ್ಣಿನಂತಹ ತುಟಿಯು, ಸಂಪಿಗೆಯಂತಹ ಮೂಗು, ಶಂಖ ಧ್ವನಿಯಂತಹ ಕಂಠ ಸ್ವರವೂ ಇದ್ದು ಆಕರ್ಷಣೆಯಿಂದ ಮೆರೆದಿದ್ದಳು. ಒಂದು ದಿನ ಆ ಬ್ರಾಹ್ಮಣನ ಶಿಷ್ಯ ಸುವ್ರತನೆಂಬುವನು ಸಮಿತ್ತುಗಳಿಗಾಗಿ ಕಾಡಿಗೆ ಹೊರಟನು. ಬ್ರಾಹ್ಮಣನ ಮಗಳೂ ಸುವ್ರತನ ಜೊತೆಯಲ್ಲೇ ಆಟವಾಡುತ್ತಾ ಹಿಂಬಾಲಿಸಿದಳು. ಅರಣ್ಯದಲ್ಲಿ ಬಹು ದೂರದವರೆಗೂ ಹೋದರು. ಸುವ್ರತ ಸಮಿತ್ತುಗಳನ್ನು ಕೂಡಿ ಹಾಕುತ್ತಿದ್ದನು.

ಅಧ್ಯಾಯ ನಾಲ್ಕು

ಮಾಘಸ್ನಾನ ಮಾಡದವನು ನಾಯಿಯಾದನು

ಮಹಾವಿಷ್ಣುವು ಲಕ್ಷ್ಮೀದೇವಿಯನ್ನು ಕುರಿತು ಹರಿವಲ್ಲಭೆ ಮಾಘಸ್ನಾನದ ಫಲವು ಇಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಮಾಘಮಾಸ ಪೂರ್ತಾ ಮಾಘಸ್ನಾನ ಮಾಡಿದವನು ಚಕ್ರವರ್ತಿಯಾಗುತ್ತಾನೆ. ಮಾಘ ಶುದ್ಧ ದಶಮಿ ದಿನವು ಮಹಾ ಶ್ರೇಷ್ಠವಾದ ದಿನವು. ಆ ದಿನ ಸೂರ್ಯೋದಯಕ್ಕೆ ಮುಂಚೆ ಎದ್ದು ನದೀ ಸ್ನಾನ ಮಾಡಿ ಆ ನದೀ ತಟಾಕದಲ್ಲೇ ಪಾರ್ವತೀ ಪರಮೇಶ್ವರರನ್ನು ತುಲಸೀ ಬಿಲ್ವಪತ್ರೆಗಳಿಂದ ಪೂಜಿಸಿ ಶಿವ ಸಾಲಿಗ್ರಾಮಕ್ಕೆ ಬ್ರಾಹ್ಮಣರಿಂದ ಪಂಚಾಭಿಷೇಕವನ್ನು ಮಾಡಿಸಿ ಪಾಯಸ, ಚಿತ್ರಾನ್ನ, ಹೋಳಿಗೆ ಹಾಲು ಹಣ್ಣುಗಳನ್ನು ನೈವೇದ್ಯ ಮಾಡಿ ಪರಮೇಶ್ವರನಿಗೆ ಹೇ ಜಗದೀಶ್ವರಾ ನನ್ನ ಹೃದಯದಲ್ಲಿ ಬಂದು ನೆಲಸು. ಸತ್ಯೇಶ್ವರಾ ನಿನಗೆ ಪಾದೋದಕವೀಯುತ್ತಿರುವೆನು. ಚಂದ್ರಶೇಖರ ಪುಷ್ಪಗಳನ್ನರ್ಪಿಸುತ್ತಿರುವೆನು. ಗಂಗಾಧರ ವಸ್ತ್ರ ಉಪವೀತಗಳನ್ನು ನೀಡುತ್ತಿರುವೆನು. ಉಮಾಮಹೇಶ್ವರ ಧೂಪವನ್ನು ಸ್ವೀಕರಿಸು. ಫಾಲನೇತ್ರ ಫಲಕ್ಷೀರ ನೈವೇದ್ಯವನ್ನು ಸ್ವಾದಿಸು. ಚಂದ್ರಚೂಡನೇ ದೀಪವನ್ನಿಡುತ್ತಿರುವೆನು. ಶಂಕರಾ ನಮಸ್ಕರಿಸುತ್ತಿರುವೆ. ಶಿವನೇ ಮಂಗಳನೇ ನನ್ನನ್ನು ಕಾಪಾಡು, ರಕ್ಷಿಸು ಎಂದು ಅರ್ಘ್ಯವನ್ನು ಕೊಡಬೇಕು. ಬ್ರಾಹ್ಮಣನಿಗೆ ಊಟಮಾಡಿಸಿ ಫಲ ತಾಂಬೂಲಾದಿಗಳನ್ನು ಕೊಟ್ಟು ನಮಸ್ಕರಿಸಬೇಕು. ಹಾಗೆ ಮಾಡಿದಲ್ಲಿ ಈ ಜನ್ಮದಲ್ಲಿ ಇಹ ಸೌಭಾಗ್ಯಗಳನ್ನೆಲ್ಲಾ ಅನುಭವಿಸಿ ಶಿವಸಾಯುಜ್ಯವನ್ನು ಪಡೆಯುವುದರಲ್ಲಿ ಸಂದೇಹವೇ ಇಲ್ಲ.

ಮಾಘ ವ್ರತವನ್ನು ಆಚರಿಸುವವರು ತಂದೆ ತಾಯಿ ಪತ್ನೀಸುತರ ಸಮೇತರಾಗಿ ಬ್ರಾಹ್ಮಣರಿಗೆ ಅಕ್ಕಿ, ಬೆಲ್ಲ, ಹಾಲು, ಹಣ್ಣುಗಳನ್ನು ದಾನ ಮಾಡಬೇಕು. ಶಿವಲಿಂಗವನ್ನು ಬೆಳ್ಳಿಯಲ್ಲೊ, ಬಂಗಾರದಲ್ಲೋ ಮಾಡಿಸಿ ಬ್ರಾಹ್ಮಣರಿಗೆ ದಾನ ಮಾಡಬೇಕು. ಅಕ್ಷತೆಯನ್ನು ಕೈಲಿ ಹಿಡಿದುಕೊಂಡು ಮಾಘ ಪುರಾಣವನ್ನು ಕೇಳಬೇಕು. ಹೀಗೆ ಮಾಡಿದರೆ ಅವರಿಗೆ ಕೈವಲ್ಯ ಪ್ರಾಪ್ತಿಯು ಶತ ಸಿದ್ಧವು.

ಪ್ರತಿ ಮಾಘಮಾಸದಲ್ಲೂ ಪುಣ್ಯ ನದಿಗಳಲ್ಲಿ ಸ್ನಾನ ಮಾಡಿ, ದೇವರನ್ನು ಪೂಜಿಸುವುದನ್ನು ಮರೆಯಬೇಡ. ಮಾಘ ವ್ರತವು ಅಶ್ವಮೇಧ ಫಲವನ್ನೂ ನೀಡುತ್ತದೆ. ಈ ರೀತಿ ನಡೆದರೆ ಇಹದಲ್ಲಿ ಸುಖ ಅನುಭವಿಸಿ, ಕಡೆಗೆ ದೈವ ಸಾನ್ನಿಧ್ಯವನ್ನು ಪಡೆಯುವೆ ಎಂದು ಉಪದೇಶಿಸಿದನು.

ವಿಶೃಂಖಿಲನು ವೀರವ್ರತನಿಗೆ ವಂದಿಸಿ, ಆತನ ಉಪದೇಶದಂತೆ ನಡೆದು, ದೇಹಾಂತ್ಯದಲ್ಲಿ ಶಿವಸಾಯುಜ್ಯವನ್ನು ಪಡೆದನೆಂಬಲ್ಲಿಗೆ ಇಪ್ಪತ್ತಾರನೆಯ ಅಧ್ಯಾಯ ಮುಗಿದುದು.

ತಿ : ಧರ್ಮರೀತಿಯಲ್ಲಿ ನಡೆ, ಜೀವನದ ಮರ್ಮವನ್ನು ತಿಳಿ.

ಅಧ್ಯಾಯ ಇಪ್ಪತ್ತೇಳು

ಪುತ್ರಸಂತಾನಕ್ಕಾಗಿ ವರ

ಗೃತ್ಸ್ನ ಮುನಿಯು ಜುಹ್ನು ಮುನಿಯನ್ನು ಕುರಿತು "ಮಾಘಮಾಸದ ಮಹಿಮೆಯನ್ನು ಮತ್ತೂ ತಿಳಿಸುತ್ತಿದ್ದೇನೆ ಕೇಳಿ.

ಪೂರ್ವಕಾಲದ ದ್ವಾಪರಯುಗದಲ್ಲಿ ಸುಲಕ್ಷಣನೆಂಬ ರಾಜನು ಸೂರ್ಯವಂಶದಲ್ಲಿ ಜನಿಸಿದ್ದನು. ಅಂಗರಾಜ್ಯವನ್ನು ಪರಿಪಾಲಿಸುತ್ತಿದ್ದನು. ಆತನಿಗೆ ನೂರು ಜನ ಪತ್ನಿಯರಿದ್ದರು. ಆತನು ಧಾರ್ಮಿಕ ಕಾರ್ಯಗಳಲ್ಲಿ ನಿರತನಾಗಿದ್ದರೂ, ಆತನಿಗೆ ಪುತ್ರ ಸಂತಾನವಿರಲಿಲ್ಲ. ರಾಜನು ಅದಕ್ಕಾಗಿ ಬಹಳ ವ್ಯಥೆಪಟ್ಟು, ತನ್ನಲ್ಲಿ ತಾನೇ ಚಿಂತಿಸಿದನು. ಪುತ್ರಹೀನರಿಗೆ ಪುಣ್ಯಲೋಕಗಳು ಇಲ್ಲವೆನ್ನುತ್ತಾರಲ್ಲಾ ಎಂದು ಯೋಚಿಸಿ ಧರ್ಮನಿರತ ಮುನಿಗಳಲ್ಲಿಗೆ ಹೋದನು. ಮುನಿಗಳಿಗೆ

ತಪಸ್ಸು ಮಾಡಲು ಹೊರಟನು ಎಂಬಲ್ಲಿಗೆ ಹದಿನೆಂಟನೆಯ ಅಧ್ಯಾಯವು ಮುಗಿದುದು.

ನೀತಿ : ವಿವೇಕಿಗಳೂ ಸಹ ದೇಹಾಭಿಮಾನದಿಂದ ಸಲ್ಲದ ಚಿಂತೆಗೆ ಗುರಿಯಾಗುತ್ತಾರೆ.

ಅಧ್ಯಾಯ ಹತ್ತೊಂಬತ್ತು

ಮೃತ್ಯುಂಜಯ

ವಿಪ್ರವರ್ಯನು ಮತ್ತೆ ತಪಸ್ಸಿಗೆ ಕುಳಿತುದುದನ್ನು ಕಂಡು ಮತ್ತೆ ದರ್ಶನವನ್ನಿತ್ತನು. ಭಕ್ತನನ್ನು ಕುರಿತು "ಅಯ್ಯಾ ಪುನಃ ಏಕೆ ನೀನು ನನ್ನನ್ನು ಕರೆದೆ" ಎನಲು ವಿಪ್ರವರ್ಯನು, ದೇವಾ, ನಿನ್ನ ಕೃಪೆಯಿಂದ ಪುತ್ರ ಸಂತಾನವಾಯಿತು. ಸಂತೋಷಗೊಂಡೆ. ಆದರೆ ನಾರದ ಮುನಿಗಳು ಬಂದು ನನ್ನ ಮಗನಿಗೆ ಹನ್ನೆರಡು ವರ್ಷ ಆಯಸ್ಸೆಂದು ಹೇಳಿದರು. ನನ್ನ ಹೆಂಡತಿ ಮಗನಿಗಾಗಿ, ಹಗಲಿರುಳು ಅಳುತಿದ್ದಾಳೆ. ನೀನೀಗ ಕೃಪೆ ತೋರಿ ನನ್ನ ಮಗನ ಆಯಸ್ಸನ್ನು ಹೆಚ್ಚಿಸಬೇಕು ಎಂದು ಪ್ರಾರ್ಥಿಸಿದನು.

ಮಹಾವಿಷ್ಣುವು, ವಿಪ್ರನನ್ನು ಕುರಿತು "ಭಕ್ತ ನಿನ್ನ ಭಕ್ತಿಗೆ ಮೆಚ್ಚಿ ಪುತ್ರಸಂಪದವಿತ್ತೆ. ಆದರೆ ಅವನಿಗೆ ಹನ್ನೆರಡು ವರ್ಷಕ್ಕೆ ಗಂಡಾತರವಿದೆ. ಅದಕ್ಕೆ ನಿನ್ನ ಪತ್ನಿಯೇ ಕಾರಣ. ಅದು ಹೇಗೆಂದರೆ ಪೂರ್ವದಲ್ಲಿ ನಿನ್ನ ಹೆಂಡತಿ ಒಬ್ಬ ಸದ್ಬ್ರಾಹ್ಮಣನ ಮಗಳು. ಜ್ಞಾನಶರ್ಮನೆಂಬ ಬ್ರಾಹ್ಮಣನ ಪತ್ನಿಯಾಗಿದ್ದಳು. ರೂಪವಂತೆ, ಗುಣವಂತೆಯೂ, ಪತಿವ್ರತೆಯೂ ಆಗಿದ್ದಳು. ಒಂದು ಸಲ ಮಾಘಮಾಸದಲ್ಲಿ ಮಾಘವ್ರತ ಆಚರಿಸುತ್ತಿದ್ದರು. ಆಕೆ ಮಾಘಸ್ನಾನ ನಿಷ್ಠೆಯಿಂದ ಮಾಡಿದಳು. ಮಾಘ ಪೌರ್ಣಮಿಯಂದು ಪಾಯಸ ದಾನ ಕೊಡಬೇಕೆಂದು ಆಕೆಯ ಪತಿ ಹೇಳಲು, ಆಕೆ ಅದಕೊಪ್ಪಲಿಲ್ಲ. ಆ ಜನ್ಮ ಕಳೆಯಿತು. ಈಗ ನೀವಿಬ್ಬರೂ ಪತಿಪತ್ನಿಯರಾಗಿದ್ದಿರಿ. ಪಾಯಸ ಕೊಡದ ಪಾಪಕ್ಕಾಗಿ ಮಕ್ಕಳಿಲ್ಲದಾಯ್ತು. ಗಂಡನ ಮಾತನ್ನು ಮೀರಿದ್ದಕ್ಕಾಗಿ, ಪುತ್ರನ ಆಯಸ್ಸು ಕಡಿಮೆಯಾಯ್ತು. ಅದನ್ನೇ ನಾರದನು ಹೇಳಿದುದು.

…ಜ್ಞಾನವನ್ನು, ನೀನು ಹೋಗಿ ಕೇಳು. ನಿನಗೆ
…ಮಹಾವಿಷ್ಣು.

…ನಿಯು ಹರಿಯಾಜ್ಞೆಯಂತೆ ನೈಮಿಷಾರಣ್ಯಕ್ಕೆ
ಉದ್ದೇಶಿಸಿ ಸವಿನುಡಿಗಳನ್ನಾಡಿದನು. ಅಲ್ಲಿ
…ಾರ್ಕಂಡೇಯ ವಚನವನ್ನು ಆಲಿಸುತ್ತಿದ್ದರು,
…ಗಳು ಅಲ್ಲಿಗೆ ಬಂದರು. ಅವರು ಎಂದೂ
…ಾಂತರಗಳನ್ನು ಕಂಡವರೇ, ಹರಿಕೀರ್ತನೆ
ಬಂದರು. ಮಾರ್ಕಂಡೇಯ ಮಹಾ ಮುನಿ
…ಾಲಕರೇ ಆದ ಸನಕ ಸುಜಾತರನ್ನು ವಂದಿಸಿ,
…ಂಡ ನನ್ನ ಜನ್ಮ ಪಾವನವಾಯಿತು. ಎನಲು
…ುನಿಗಳೇ ಬ್ರಹ್ಮ ಕಲ್ಪಗಳನ್ನು ಕಂಡ ಮಹ
…ದ್ಧರಾಗಿರುವವರಿಗೂ ನಮ್ಮಂಥಹ ಬಾಲಕರಿಗೆ
…ಗೆ, ಮಾರ್ಕಂಡೇಯನು, ನೋಡಲು ಬಾಲಕ
…ರಿಕೀರ್ತನೆಯಲ್ಲಿ ಮುಳುಗಿರುವವರು. ನೀವು
…ಯಸ್ಸು ಮುಖ್ಯವಲ್ಲವು. ಜ್ಞಾನವೇ ಮುಖ್ಯ
…ರು ಚಿಕ್ಕವರಾಗಿದ್ದರೂ ಪೂಜನೀಯರು.
…ೀಧಾದಿಗಳನ್ನು ಗೆಲ್ಲದವರು ಅಜ್ಞಾನಿಗಳಂತೆ,
ನಿಮ್ಮ ಜ್ಞಾನದ ಮುಂದೆ ನನ್ನ ವಯಸ್ಸು
…ದರೂ ನೈಮಿಷಾರಣ್ಯ ಮುನಿವೃಂದವೂ
…ಳ ಮಾತನ್ನು ಕೇಳಿದರು.

ಅಜ್ಞಾನದ ಬಗ್ಗೆ ಜಿಗುಪ್ಸೆಗೊಂಡರು.
…ತರಿಗೆ ವಂದಿಸಿದರು. ಹರಿಕೀರ್ತನೆಯಲ್ಲಿ

… ಹರಿಪಾದ ಸೇವೆಯಲ್ಲಿರುವವರು, ಸದಾ ಹರಿ
…ೂಜನೀಯರಾಗುತ್ತಾರೇ. ಸನಕ ಸುಜಾತರೇ,

ನಿನ್ನ ಇಂದು ಎಲ್ಲರೂ ಅರಿಯುವಂತೆ ಹರಿನಾಮ ಸಂಕೀರ್ತನೆ ಮಾಡಿರಿ. ಎಲ್ಲರೂ ಅವರವರ ಜನ್ಮಸಾರ್ಥಕತೆಯನ್ನು ಕಂಡುಕೊಳ್ಳಿರಿ. ಯಾವನು ಸದಾ ಹರಿಸ್ಮರಣೆ ಮಾಡುತ್ತಿರುತ್ತಾನೋ, ಅವನಿಗೆ ಎಂದೂ ಯಾವ ದುಃಖವೂ ಸಂಭವಿಸದು. ಅವನನ್ನು ಹಿಂಬಾಲಿಸುವ ಪಾಪವೂ ಸಹ ಪರಿಹಾರವಾಗುತ್ತದೆ. ದೇವರನ್ನು ಪೂಜಿಸುವ, ನಿರಂತರ ಹರಿನಾಮ ಮಾಡುವವರ, ಯೋಗಕ್ಷೇಮವೆಲ್ಲವನ್ನೂ ಆ ದೇವರೆ ನೋಡಿಕೊಳ್ಳುತ್ತಾನೆ, ಎಂದು ಹೇಳಿದರು.

ಸನಕಸುಜಾತರು ಹರಿಕೀರ್ತನೆ ಮಾಡಿದರು. ನೈಮಿಷಾರಣ್ಯ ಮುನಿವೃಂದದವರೆಲ್ಲರೂ ಪರಮ ಪಾವನರಾದರು.

ಇದನ್ನು ಕಂಡ ಮಹಾವಿಷ್ಣುವು ಸೂತ ಮಹಾಮುನಿಗಳನ್ನು ಕರೆದು ಶೌನಕಾದಿಗಳಿಗೆ ಹರಿಕಥಾಮೃತವನ್ನು ಪಾನಮಾಡಿಸುವಂತೆ ತಿಳಿಸಿದನು. ಎಂಬಲ್ಲಿಗೆ ಹದಿನಾಲ್ಕನೆಯ ಅಧ್ಯಾಯ ಮುಗಿದುದು.

ನೀತಿ : ಜ್ಞಾನವೇ ಎಲ್ಲದುದಕ್ಕಿಂತ ದೊಡ್ಡದು. ಅಜ್ಞಾನಿಗಳು ಅಹಂಕಾರದಿಂದ ಮೆರೆಯುತ್ತಾರೆ.

ಅಧ್ಯಾಯ ಹದಿನೈದು

ವಿಶ್ವೇಶ್ವರಿ ದರ್ಶನ

ಸೂತಪುರಾಣಿಕರು ಶೌನಕಾದಿಗಳನ್ನು ಕುರಿತು, ಬ್ರಹ್ಮ, ವಿಷ್ಣು ಮಹೇಶ್ವರರ ಬಗೆಗಿನ ರಹಸ್ಯವನ್ನು ತಿಳಿಸಲು ಉಪಕ್ರಮಿಸಿದರು. "ಒಂದೆ ತ್ರಿಮೂರ್ತಿಗಳಲ್ಲೀ ಸಂಶಯವು ಹುಟ್ಟಿತು. ಸೃಷ್ಟಿ, ಸ್ಥಿತಿ ಲಯಗಳ ಕಾರ್ಯ ಗಳಲ್ಲಿ, ಮೂವರೂ ತಮ್ಮ ತಮ್ಮಲ್ಲೀ ಹೆಚ್ಚುಗಾರಿಕೆಯನ್ನು ತೋರ್ಪ ಡಿಸಿಕೊಳ್ಳಲು ಹೊರಟರು.

ಸೃಷ್ಟಿಯೇ ಇಲ್ಲದೆ, ಯಾವುದೂ ನಡೆಯದೆಂದು ಬ್ರಹ್ಮನು, ಸೃಷ್ಟಿ ಸಿದುದನ್ನು ಪಾಲಿಸದಿದ್ದರೆ, ಸಾಧ್ಯವೇ ಇಲ್ಲವೆಂದು ವಿಷ್ಣುವೂ, ಲಯ

ು ನಾಲ್ಕು

ವನು ನಾಯಿಯಾದನು

ಯನ್ನು ಕುರಿತು ಹರಿವಲ್ಲಭೆ ಮಾಘ
ಾಧ್ಯವಿಲ್ಲ. ಮಾಘಮಾಸ ಪೂರ್ತಾ
ರ್ಯಯಾಗುತ್ತಾನೆ. ಮಾಘ ಶುದ್ಧ
ದಿನವು. ಆ ದಿನ ಸೂರ್ಯೋದಯಕ್ಕೆ
ನದೀ ತಟಾಕದಲ್ಲೇ ಪಾರ್ವತೀ ಪರ
ಂದ ಪೂಜಿಸಿ ಶಿವ ಸಾಲಿಗ್ರಾಮಕ್ಕೆ
ಡಿಸಿ ಪಾಯಸ, ಚಿತ್ರಾನ್ನ, ಹೋಳಿಗೆ
ಪರಮೇಶ್ವರನಿಗೆ ಹೇ ಜಗದೀಶ್ವರಾ
್ವರಾ ನಿನಗೆ ಪಾದೋದಕವೀಯುತ್ತಿ
ನ್ನರ್ಪಿಸುತ್ತಿರುವೆನು. ಗಂಗಾಧರ
ಉಮಾಮಹೇಶ್ವರ ಧೂಪವನ್ನು
ೈದ್ಯವನ್ನು ಸ್ವಾದಿಸು. ಚಂದ್ರ
ಾ ನಮಸ್ಕರಿಸುತ್ತಿರುವೆ. ಶಿವನೇ
ದು ಅರ್ಘ್ಯವನ್ನು ಕೊಡಬೇಕು.
ಾದಿಗಳನ್ನು ಕೊಟ್ಟು ನಮಸ್ಕರಿಸ
ಹ ಸೌಭಾಗ್ಯಗಳನ್ನೆಲ್ಲಾ ಅನು
ಸಂದೇಹವೇ ಇಲ್ಲ.

ತಂದೆ ತಾಯಿ ಪತ್ನೀಸುತರ
ಹಾಲು, ಹಣ್ಣುಗಳನ್ನು ದಾನ
, ಬಂಗಾರದಲ್ಲೋ ಮಾಡಿಸಿ
ನ್ನು ಕೈಲಿ ಹಿಡಿದುಕೊಂಡು
ಮಾಡಿದರೆ ಅವರಿಗೆ ಕೈವಲ್ಯ

ಮಾಘ ಶುದ್ಧ ದಶಮೀ ಅಶ್ವತ್ಥವೃಕ್ಷ ದಡಿಯಲ್ಲಿ ಮಾಘ ಪೂಜೆಯನ್ನು ಮಾಡಿದುದನ್ನು ನೋಡಿದವರು, ಮಾಘ ಚರಿತ್ರೆಯನ್ನು ಕೇಳಿದವರು ದುರ್ಯೋನಿಯಲ್ಲಿ ಜನಿಸಿದ್ದರೂ ಸಹ ಪುಣ್ಯಶಾಲಿಗಳಾಗುತ್ತಾರೆ ಇದಕ್ಕೊಂದು ನಿದರ್ಶನವನ್ನು ಹೇಳುತ್ತೇನೆ ಕೇಳು.

ಹಿಂದೆ ಮಹಾ ತಪೋಧನರೂ ಮುನಿಕುಲೋತ್ತಮರೂ ಆದ ಗೌತಮ ಋಷಿಗಳು ಕೃಷ್ಣವೇಣಿ ನದೀ ತೀರಕ್ಕೆ ಬಂದರು. ಆಗ ಮಾಘಮಾಸವಾಗಿದ್ದಿತು. ಅವರು ಅಲ್ಲೇ ಬಿಡಾರ ಹೂಡಿ ಮಾಘ ವ್ರತವನ್ನು ಆಚರಿಸುತ್ತಿದ್ದರು. ಮಾಘ ಶುದ್ಧ ದಶಮೀ ದಿನ ಸುರ್ಯೋದಯಕ್ಕೆ ಮುಂಚೆಯೇ ಎದ್ದು ಶೌಚಾದಿ ಕರ್ಮಗಳನ್ನು ತೀರಿಸಿಕೊಂಡು ನದಿಯಲ್ಲಿ ಸ್ನಾನ ಮಾಡಿ ಅಶ್ವತ್ಥವೃಕ್ಷ ದಡಿಯಲ್ಲಿ ಸಾರಿಸಿ, ರಂಗೋಲಿ ಇರಿಸಿ ಪಾರ್ವತೀ ಪರಮೇಶ್ವರರನ್ನು ಶ್ರದ್ಧಾಭಕ್ತಿಗಳಿಂದ ಪೂಜಿಸುತ್ತಿರಲು ಅಲ್ಲಿಗೆ ಒಂದು ಹೆಣ್ಣು ನಾಯಿ ಬಂದು ಕುಳಿತಿತು. ಶಿಷ್ಯರು ಅದನ್ನು ಕೋಲಿನಿಂದ ಹೊಡೆದು ಓಡಿಸಿದರು. ಆ ನಾಯಿಯು ಅಶ್ವತ್ಥಕ್ಕೆ ಪ್ರದಕ್ಷಿಣೆ ಹಾಕಿ ಮತ್ತೆ ಬಂದಿತು. ಮಾಘ ಪುರಾಣ ಶ್ರವಣ ನಡೆಯುತ್ತಲೇ ಇತ್ತು. ಮತ್ತೆ ನಾಯಿಯನ್ನು ಬೆದರಿಸಿದರು. ಹೀಗೆ ಮೂರು ಬಾರಿಯೂ ನಾಯಿಯು ಅಶ್ವತ್ಥಕ್ಕೆ ಪ್ರದಕ್ಷಿಣೆ ಹಾಕಿ ಮತ್ತೆ ಅಲ್ಲೇ ಬಂದು ಕುಳಿತಿತು. ಮಾಘ ಪುರಾಣ ಕೇಳುತ್ತಾ ಪೂಜೆಯನ್ನು ನೋಡುತ್ತಾ ಇದ್ದಂತೆಯೇ ನಾಯಿಯ ರೂಪು ಹೋಗಿ ದಿವ್ಯ ಮಾನವರೂಪು ಗೋಚರಿಸಿತು. ಮುನಿವೃಂದವೆಲ್ಲವೂ ಆಶ್ಚರ್ಯದಿಂದ ವೀಕ್ಷಿಸಲು, ಮುನಿವರ್ಯ ಗೌತಮರು ಆ ಮನುಷ್ಯನನ್ನು ಕುರಿತು ನೀನು ಯಾರು ಇಲ್ಲಿಗೇಕೆ ಬಂದೆ ಎಂದು ಕೇಳಿದರು.

ಅದಕ್ಕೆ ಆ ಮನುಜನು, ಮುನಿವರ್ಯಾ ನಾನು ಚಂದ್ರ ವಂಶದ ರಾಜನು. ವೇಗರಥನೆಂದು ನನ್ನ ಹೆಸರು. ಮಗದೇಶಾಧಿಪತಿಯು. ನಾನು ಧರ್ಮದಿಂದ ರಾಜ್ಯವನ್ನು ಪಾಲಿಸಿಕೊಂಡು ದಾನ ಧರ್ಮಗಳನ್ನು ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದೆನು. ಒಂದು ದಿನ ನಮ್ಮ ಅರಮನೆಗೆ ಪಿಂಗಳನೆಂಬ ಮುನಿವರ್ಯನು ಬಂದನು. ಆತನನ್ನು ನಾನು ಸಕಲ

...ತೆಯೇ ಗುರುಗಳ ಅಪ್ಪಣೆ ಪಡೆದು ಗಂಗಾ ತೀರಕ್ಕೆ
... ದಾರಿ ಮಧ್ಯೆಯಲ್ಲಿ ಋಷಿವರ್ಯರೋರ್ವರು ಮಾಘ
...ರು. ಸುಮಿತ್ರನು ಋಷಿಗಳನ್ನು ಕುರಿತು "ಋಷಿ
...ಸುತ್ತಿರುವ ವ್ರತವಾವುದು ? ಇದರಿಂದಾಗುವ ಫಲ
...ಿದನು.

...ತಮ್ಮ ಶಿಷ್ಯನಾದ ಸತ್ಯವ್ರತನೆಂಬುವನಿಗೆ ಮಾಘ
...ಯನ್ನು ತಿಳಿಸೆಂದು ಹೇಳಿದರು. ಸತ್ಯವ್ರತನು
...ಬ್ರಾಹ್ಮಣಕುಮಾರ ಸೂರ್ಯನು ಮಕರ ರಾಶಿಯಲ್ಲಿ
...ಯಾವನಾದರೂ ಸೂರ್ಯೋದಯಕ್ಕೆ ಮುಂಚೆಯೇ
...ನ್ನು ಮಾಡುವನೋ ಅಂಥವನ ಪಾಪಗಳೆಲ್ಲವೂ
...ವುವು. ಕ್ರಿಯಾಲೋಪ ಮಾಡದೆ ಮಾಘಮಾಸ
...ನ್ನು ಮಾಡುವವನು ಪರಮೇಶ್ವರನ ಸನ್ನಿಧಿಯನ್ನು

...ವೇ ಇರುವವನು, ವ್ರತ ಮಾಡುವವರನ್ನು ನಿಂದಿ
...ಗಳನ್ನು ಹೇಳುವವನು, ಪರರ ದ್ರವ್ಯವನ್ನು ಅಪ
...ಗಳನ್ನು ದೂಷಿಸುವವನು, ಪರಸ್ತ್ರೀ ಸಂಗ ಮಾಡಿ
...ಯುವವನು, ಮಾಘ ವ್ರತವನ್ನು ತ್ಯಜಿಸಿದವನು
...ಮೋಚನವರೆಂದು ಹೇಳುತ್ತಾರೆ.

...ಸುವವನು, ಕೆರೆಯ ಕಟ್ಟೆಯನ್ನು ಒಡೆದು ನೀರು
...ಮಾಡಿಕೊಟ್ಟು ತಪ್ಪು ಮಾಡುವವನು, ಆತ್ಮ
... ದೇವರಿಗೆ ನೈವೇದ್ಯವನ್ನು ಮಾಡದೆ ತಿನ್ನು
...ಯರ್ಾ ಸಂಗ ಮಾಡುವವನು, ಗುರುಪತ್ನೀ
...ಾಸಿಸುವವನು, ಚಂಡಾಲ ಸ್ನೇಹ ಮಾಡು
... ಪಾತಕರೆಂದು ಕರೆಯುತ್ತಾರೆ.

ವಿವಾಹ, ಉಪನಯನ, ಮಾಘ ಪುರಾಣಗಳನ್ನು ಅಡ್ಡಿಪಡಿಸುವವನು, ತಂದೆ ತಾಯಿಗಳೊಡನೆ ಜಗಳ ಮಾಡುವವನು, ತನ್ನ ಪತ್ನಿಯನ್ನು ತ್ಯಜಿಸಿದವನು, ತೀರ್ಥಯಾತ್ರೆಗಳಲ್ಲಿ ಮನಸ್ಸಿಲ್ಲದವನು, ಇವರುಗಳೆಲ್ಲಾ ಮಾಘಸ್ನಾನ ಬಿಟ್ಟ ಅಧಮರಂತೆ ಕಾಣುವರು. ಆದುದರಿಂದ ತಪ್ಪದೆ ಮಾಘಸ್ನಾನಮಾಡಿ ಪುಣ್ಯ ವಂತನಾಗಬೇಕು.

ಈಗ ನಾವು ಮಾಡುತ್ತಿರುವುದು ಮಾಘಮಾಸ ವ್ರತವೇ. ಮಾಘ ಮಾಸದಲ್ಲಿ ನದಿಯಲ್ಲಿ ಸ್ನಾನ ಮಾಡಿ ತುಳಸಿಯಿಂದ ಹರಿಯನ್ನು ಅರ್ಚಿಸಿದರೆ ಅಥವಾ ಬಿಲ್ವಪತ್ರೆಯಿಂದ ಶಿವನನ್ನು ಪೂಜಿಸಿದರೆ ಎಲ್ಲಾ ಪಾಪಗಳೂ ಪರಿಹಾರ ವಾಗುವುವು. ಮಾಘಮಾಸ ಪೂರ್ತಿ ಸ್ನಾನ ಆಚರಿಸಿ ಮಾಘ ಪುರಾಣವನ್ನು ಪಠಣಮಾಡಿ ಬ್ರಾಹ್ಮಣರಿಗೆ ಭೋಜನಮಾಡಿಸಿ ವಸ್ತ್ರ, ತಾಂಬೂಲ, ದಕ್ಷಿಣೆ ದಾನ ಮಾಡಿ ವ್ರತವನ್ನು ಸಾಂಗವಾಗಿ ಪೂರೈಸಿದರೆ ಮತ್ತೆ ನಿನಗೆ ಜನ್ಮ ಬರು ವುದಿಲ್ಲ. ಅರ್ಜಿತ ಪಾಪಗಳೆಲ್ಲವೂ ಪರಿಹಾರವಾಗುತ್ತವೆ.

ಈಗ ನೋಡು ಮೂರುದಿನ ಮಾತ್ರ ಉಳಿದಿದೆ. ನೀನು ಮಾಘ ಸ್ನಾನ ಮಾಡಿ ಶಿವನನ್ನು ಪ್ರಾರ್ಥಿಸು. ನಿನ್ನ ಪಾಪಗಳೆಲ್ಲಾ ಪರಿಹಾರವಾಗುವುದು. ಹಾಗೆಯೇ ಗಂಗಾ ತೀರಕ್ಕೆ ಹೋಗಿ ಗುರು ವಚನವನ್ನು ಪಾಲಿಸು. ಈ ಜನ್ಮ ದಿಂದ ಮುಕ್ತನಾಗುವೆ ಎಂದನು.

ಸುಮಿತ್ರನು ಆನಂದದಿಂದ ವಂದಿಸಿ ಅಲ್ಲಿಂದ ಹೊರಟು ಗಂಗಾ ನದಿಯ ತಟವನ್ನು ಸೇರಿ ಮೂರು ದಿನಗಳೂ ಮಾಘಸ್ನಾನ, ಜಪ, ತಪ, ಶಿವನ ಸ್ಮರಣೆ ಮಾಡಿ ನಂತರ ತಪಸ್ಸನ್ನಾಚರಿಸಲು ಪಾರ್ವತೀ ಸಮೇತನಾಗಿ ಶಿವನು ಪ್ರತ್ಯಕ್ಷನಾಗಿ ಸುಮಿತ್ರನಿಗೆ ಕೈವಲ್ಯ ಪದವನ್ನು ಇತ್ತನು.

ಹೀಗೆ ಮಾಘಮಾಸ ಮಹಿಮೆಯಿಂದ ಸುಮಿತ್ರನ್ನು ಪಾಪವರ್ಜಿತನಾದು ದನ್ನು ಯಾರು ಮಾಘಮಾಸದಲ್ಲಿ ಕೇಳುವರೋ ಅವರ ಪಾಪಗಳೆಲ್ಲಾ ಪರಿ ಹಾರವಾಗುವುದರಲ್ಲಿ ಸಂಶಯವಿಲ್ಲವೆಂಬುದಾಗಿ ತಿಳಿಸಲು ಮೂರನೆಯ ಅಧ್ಯಾ ಯವು ಮುಗಿದುದು.

ನೀತಿ: ಮಾಘ ಸ್ನಾನದಿಂದ ಪಾಪಗಳು ನಿರ್ನಾಮ.

ಇಬ್ಬರೂ ರತಿಕ್ರೀಡೆಯಲ್ಲಿ ತೊಡಗೋಣ. ಯಾವ ಅಭ್ಯಂತರವೂ ಇಲ್ಲ" ಎಂದು ಹೇಳಿದೆ. ಹಾಗೆಯೇ ಆ ತರುಣ ಬಂದ. ಇಬ್ಬರೂ ರಾತ್ರಿಯೆಲ್ಲಾ ಕಾಮಕೇಳಿಯಲ್ಲಿ ತಲ್ಲೀನರಾದೆವು. ಬೆಳಗಾಗುತ್ತಿದ್ದಂತೆ ವೈಶ್ಯ ತರುಣ ಎದ್ದು ಮನೆಗೆ ಹೋದ. ಅಂದಿನ ಸುಖವು, ನನಗೆ ಮುಂದೆ ಬೇರೆಯವರ ಸಂಗ ಬೆರೆಯಲು ಧೈರ್ಯವಾಯಿತು. ಪ್ರತಿ ದಿನವೂ ಬೇರೆಯವರೊಂದಿಗೆ ಸರಸ-ಸಲ್ಲಾಪಗಳಲ್ಲಿ ತೊಡಗಿದೆ. ಹಣವೂ ಶೇಖರಣೆಯಾಯಿತು. ಕಾಮ ತೃಪ್ತಿಯೂ ಆಯಿತು. ಕಾಲಕ್ರಮೇಣ ರೋಗಗ್ರಸ್ಥಳಾಗಿ ಮರಣಿಸಿ, ಅನೇಕ ವಿಧವಾದ ನರಕಯಾತನೆ ಪಟ್ಟು, ಹುಲಿ, ನಾಯಿ ಜನ್ಮಗಳನ್ನೆತ್ತಿ, ಕಡೆಗೆ ಓತೀಕೇತನ ಜನ್ಮ ಪಡೆದು ಇದ್ದೆ.

ಹಿಂದೆ ಒಂದು ದಿನ ವೈಶಾಖದಲ್ಲಿ ದಣಿದು ಬಂದ ಬ್ರಾಹ್ಮಣನಿಗೆ ತಂಗಳನ್ನು ನೀಡಿದ ಫಲದಿಂದ, ಇಂದು ನಿಮ್ಮಿಂದ ನನಗೆ ಮುಕ್ತಿಯಾಯಿತು" ಎಂದಳು.

ಅದನ್ನು ಕೇಳಿದ ಅವರು ಆಶ್ಚರ್ಯಗೊಂಡರು. ಮಾಘಸ್ನಾನ ಫಲದಿಂದ ಆದ ಫಲವನ್ನು ಕಣ್ಣಾರೆ ಕಂಡರು. ಅವರಲ್ಲೊಬ್ಬರು ಆಕೆಯನ್ನು ಮದುವೆಯಾದರು. ಅನಂತರ ದೇವೇಂದ್ರನನ್ನು ಹುಡುಕುತ್ತಾ ಪದ್ಮ ಪರ್ವತದ ಕಡೆಗೆ ನಡೆದರು. ಪದ್ಮ ಪರ್ವತದ ಗುಹೆಯ ಬಳಿ ಕತ್ತೆಯ ಮುಖವನ್ನು ಹೊತ್ತು, ಅಡ್ಡಾಡುತ್ತಿದ್ದ ದೇವೇಂದ್ರನನ್ನು ಕಂಡು, "ರಾಜಾ, ನಿಮ್ಮ ದುರ್ಗತಿಯನ್ನು ಕಂಡು ನಮಗೆ ದುಃಖವಾಗಿದೆ, ಬನ್ನಿ. ಅಮರಾವತಿಯಲ್ಲಿ ಎಲ್ಲರೂ ನಿಮಗಾಗಿ ಕಾದಿರುವರು" ಎನಲು. ನಾಚಿಕೆಯಿಂದ ದೇವೇಂದ್ರನು ಗುಹೆಯೊಳಕ್ಕೆ ಹೋದನು. ದೇವತೆಗಳು ಆತನನ್ನು ಹಿಂಬಾಲಿಸಿ, ಮಹಾವಿಷ್ಣುವು ನುಡಿದುದನ್ನು ತಿಳಿಸಿ, ಆತನ ಮನವೊಲಿಸಿ, ಆತನನ್ನು ಕರೆತಂದು ತುಂಗಭದ್ರೆಯಲ್ಲಿ ಮುಳುಗಿಸಿ, ಸಂಕಲ್ಪಪೂರ್ವಕ ಮಾಘಸ್ನಾನ ಮಾಡಿಸಿದರು. ಆ ಕ್ಷಣವೇ ದೇವೇಂದ್ರನು ಗ್ರಹಣದಿಂದ ಬಿಡಲ್ಪಟ್ಟ ಚಂದ್ರನಂತೆ ಶೋಭಿಸಿದನು. ಸಂತೋಷದಿಂದ ದೇವತೆಗಳು ಇಂದ್ರನೊಡಗೂಡಿ ರಾಕ್ಷಸರನ್ನು ಸೋಲಿಸಿ, ಸ್ವರ್ಗದಲ್ಲಿ ಸುಖವಾಗಿದ್ದರು.

ಶ್ವರಿ, ಸಲಹಮ್ಮ. ಮಾತೆ ನೀ ನಿಖಿಲೇಶ್ವರಿ ಶ್ರೀ ಮಹಾಲಕ್ಷ್ಮಿ ನೀ ಸರ್ವೇಶ್ವರೀ ಸಂಧ್ಯೆ ನೀ ವಾಣಿನೀ, ಗಾಯಿತ್ರಿ, ಸಾವಿತ್ರಿ ಸರ್ವಾರ್ಥಕಾರಿಣಿ, ಭುವನೇಶ್ವರಿ ನೀನೆ, ಕಾಣುತಲಿರುವೆ, ಎಲ್ಲೆಲ್ಲೂ ಮಾತೆ ಲಲಿತೆಯೂ ನೀನೇ ಮಾತೆ, ದುರ್ಗೆ ಮಾತೆ, ನೀನೆ ಭುವನ ಪರಿಪಾಲಕಳೆ, ರಾಜ ರಾಜೇಶ್ವರಿ ನೀನೆ ಸಲಹಮ್ಮ ಮಾತೆ ಸರಸಿಜಾಕ್ಷೆ, ಕಳೆಯಿತೆಮ್ಮಜ್ಞಾನ. ಸುಜ್ಞಾನಮಾತೆ ನೀನಲ್ಲದೇ ನಿಲ್ಲ, ಪರಾಶಕ್ತಿ ಮಾತೆ ನೀನಾದಿಶಕ್ತಿಯು, ನೀ ಪರಂಜ್ಯೋತಿಯು ನಿನ್ನ ಭಜಿಸುವ ಜನಕೆ ನೀ ಕಲ್ಪವೃಕ್ಷವು, ನೀ ಕಾಮದೇನುವು, ಎಲ್ಲದುರಿತವು ಹರಿವ ನೀ ಪರಬ್ರಹ್ಮವು, ನೀ ಪರಾತತ್ವವು.

ಎಂದೆಲ್ಲ ಸ್ತೋತ್ರ ಮಾಡುತ್ತಿರಲು ಮಾತೆಯು, ಮುಸಿನಗುತ್ತಾ, ತ್ರಿಮೂರ್ತಿಗಳಿರಾ, ನೀವಾರು, ಎಂಬುದು ತಿಳಿಯಿತಷ್ಟೆ. ಮುಂದಾದರೂ ಬೋಧವೆಣಿಸದೆ ನಡೆಯಿರಿ. ಯಾರು, ನೀವು ಸ್ತುತಿಸಿದ ನನ್ನ ಸ್ತುತಿಯನ್ನು ಪಠಿಸುತ್ತಾರೋ, ಅವರು ಈ ಜಗದ ಬಂಧನಗಳಿಂದ ಮುಕ್ತರಾಗುತ್ತಾರೆ. ಅವರಿಗೆ ಯಾವ ಭಯವೂ ಇರುವುದಿಲ್ಲ. ಜನನ ಮರಣಗಳ ಭಯವಂತೂ ಇರುವುದೇ ಇಲ್ಲ ಎಂದು ಹೇಳುತ್ತಾ ಅಂತರ್ಧಾನಳಾದಳು. ಎಂಬಲ್ಲಿಗೆ ಹದಿನೈದನೆಯ ಅಧ್ಯಾಯ ಮುಗಿದುದು.

ನೀತಿ : ಕೋಪ, ಅಹಂಕಾರಗಳಿರುವ ಕಡೆ, ವಿವೇಕವಿಲ್ಲವಾಗುತ್ತದೆ.

ಅಧ್ಯಾಯ ಹದಿನಾರು

ಹರಿಹರರಲ್ಲಿ ಐಕ್ಯತೆ

ಜಗನ್ಮಾತೆಯ ದರ್ಶನದ ನಂತರ ಮಹಾವಿಷ್ಣುವು ಬ್ರಹ್ಮದೇವನನ್ನು ಕುರಿತು, "ಬ್ರಹ್ಮದೇವ ನೀನೂ ಪ್ರಭುವೇ, ಸಕಲ ಜಗಜೀವರಾಶಿಗಳನ್ನು ಸೃಷ್ಟಿಸುವವನು. ವೇದಗಳಿಗೆ ಸ್ಥಾನಭೂತನು, ಯಜ್ಞಗಳಿಗೆ ಅಧಿಪತಿಯು. ಎಲ್ಲರನ್ನೂ ರಕ್ಷಿಸುವವನು, ಸರ್ವಲೋಕಗಳಿಗೂ ಸಂಪತ್ತನ್ನು ಕೊಡುವವನು,